The motion was adopted and leave was granted.

SRI M. S. KRISHNAN.— I introduce the Bill.

MADAM SPEAKER.—The Bill is introduced.*

The Mysore Co-operative Societies (Amendment) Bill, 1972."

SRI M.S. KRISHNAN.-Madam I beg leave of the House to introduce·

"The Mysore Co-operative Societieis (Amendment) Bill, 1972"

MADAM SPEAKER.— The question is:

"That leave be granted to introduce the Mysore Cooperative Societies (Amendment) Bill, 1972"

The motion was adopted and leave was granted.

SRI M. S. KRISHNAN.— I introduce the Bill.

MADAM SPEAKER.— The Bill is introduced*

The Mysore Leather industries Bill, 1972-introduction.

SRI J. L. KABADE.—I beg leave of the House to introduce the Mysore Leather industries Bill, 1972.

MADAM SPEAKER.— The question is.

"That leave be granted to introduce the Mysore leather industries Bill, 1972"

The motion was adopted and leave was granted.

SRI J. L. KABADE.— I introduce the Bill.

MADAM SPEAKER.— The Bill is introduced*

*Bills as introduced are Appended.

PRIVATE MEMBERS' RESOLUTIONS.

Re: Exhibitions, name boards in public places.

† ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).— ಮಾನ್ಯ ಸಭಾಧ್ಯಕ್ಷಣಿಯವರೇ, ನಾನು ನನ್ನ ನಿರ್ಣಯವನ್ನು ಈ ಸಭೆಯ ಮುಂದೆ ತಂದಾಗ, ನಾನು ಆಗ ಮಾತನಾಡಿದಾಗ ಇಡೀ ಸಂಖ್ಯಾನಾದ್ಯಂತ ಕೆಲವರು ಬಹುಭಾಗದ ಜನ ನನಗೆ ಅಭಿನಂದನೆಯ ಕಾಗದಗಳನ್ನು ಕಳುಹಿಸಿದ್ದಾರೆ. ಮತ್ತೆ ಕೆಲವು ಜನರು ನನ್ನ ಉದ್ದೇಶವನ್ನು ತಪ್ಪಾಗಿ ತಿಳಿದುಕೊಂಡು ನನ್ನನ್ನು ಟೀಕೆಮಾಡಿ ಕೆಲವು ಕಾಗದಗಳನ್ನು ಕಳುಹಿಸಿದ್ದಾರೆ. ಅದಕ್ಕೆ ಪತ್ರಿಕೆಗಳ ವರದಿಯೇ ಕಾರಣವೆಂದು ನಾನು ತಿಳಿದುಕೊಂಡಿದ್ದೇನೆ. ನಾನು ಮಾತನಾಡುವಾಗ ಕೇವಲ ಒಂದು ಸಮಾಜ, ಬ್ರಾಹ್ಮಣ ಸಮಾಜದವರನ್ನು ಟೀಕೆಮಾಡಿದೆನೆಂದು ಕಾಗದ ಬರೆದಿದ್ದಾರೆ. ನಾನು ಮಾತನಾಡುವಾಗ ಶುದ್ಧವಾಗಿ ಹೇಳಿದ್ದೇನೆ. ಮಾನ್ಯ ಶ್ರೀ ಪೇಜಾವರ ಸ್ವಾಮಿಗಳಿಗೆ ನಾನು ಸಂಪೂರ್ಣ ಬೆಲೆ ಕೊಟ್ಟು ಗೌರವ ಕೊಟ್ಟು ಅಂತಹ ಸ್ವಾಮಿಗಳು ನಮ್ಮ ದೇಶದಲ್ಲಿ

ಹೆಚ್ಚುಹೆಚ್ಚಾಗಿ ಬರಲಿ ಎಂಬುದಾಗಿ ಹೇಳಿದ್ದೇನೆ. ಚಿತ್ರದುರ್ಗ ಸ್ವಾಮಿಗಳ ಬಗ್ಗೆ, ಸಿದ್ಧಗಂಗಾ ಸ್ವಾಮಿಗಳ ಬಗ್ಗೆ, ಹಾಗೂ ರಾಮಕೃಷ್ಣ ಮಿಷನ್ ಬಗ್ಗೆ, ನಾನು ತುಂಬಾ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದೇನೆ. ಸಮಾಜಸೇವೆ ಮಾಡತಕ್ಕ ಧುರೀಣರು ವಿಶಾಲಭಾವನೆಯನ್ನು ಇಟ್ಟುಕೊಂಡಿರುವ ಸ್ವಾಮಿಗಳು. ಅಂತಹ ವರು ನಮ್ಮ ಸಮಾಜದಲ್ಲಿ ಬರಲಿ ಎಂಬ ಮಾತನ್ನು ನಾನು ಹೇಳಿದ್ದೇನೆ. ಆ ರೀತಿಯಾಗಿ ಪತ್ರಿಕೆಗಳಲ್ಲಿ ಬರಲಿಲ್ಲ. ಹೀಗಾಗಿ ಕೆಲವರು ತಪ್ಪು ಅಭಿಪ್ರಾಯಗಳನ್ನು ನನ್ನ ಬಗ್ಗೆ ತಿಳಿದುಕೊಂಡಿದ್ದಾರೆ. ರಾಜಾರಾಮ ಮೋಹನರಾಯರು ಅಂತಹ ಬ್ರಾಹ್ಮಣರು ಹುಟ್ಟಿದರೆ ಈ ದೇಶದಲ್ಲಿ ಒಳ್ಳೆಯದಾಗುತ್ತದೆ. ಇದರಲ್ಲಿ ಪ್ರಗತಿ ವರ ಕೆಲವು ನ್ಯೂನತೆಗಳನ್ನು ಹೋಗಲಾಡಿಸಿ ಭವ್ಯವಾದಂಥ ಜನಾಂಗವನ್ನು ನಿರ್ಮಾಣಮಾಡುವ ಪರಂಪರೆ ಬೇಕೆಂಬ ಮಾತನ್ನು ಉತ್ತರಿಸಿದ್ದೇನೆ. ಅದೂ ಕೂಡ ಪತ್ರಿಕೆಗಳಲ್ಲಿ ಬರಲಿಲ್ಲ. ನಾನು ಟೀಕೆ ಮಾಡಿರುವುದು ಬೇರೆ. ನಾನು ಕೇವಲ ಮೂಢರಾಗಿರತಕ್ಕ ಜನರನ್ನು ಟೀಕೆ ಮಾಡಿದ್ದೇನೆ. ಪ್ರಗತಿಪರವಾದ ವಿಚಾರವನ್ನು ಇಟ್ಟುಕೊಂಡಿರುವ ಬ್ರಾಹ್ಮಣರನ್ನು ನಾನು ಟೀಕೆಮಾಡಲಿಲ್ಲ. ಈ ವಿಚಾರವಾಗಿ ಒಂದು ತಪ್ಪು ಅಭಿಪ್ರಾಯ ಉಂಟಾಗಿ ಅನೇಕರು ನನಗೆ ಕಾಗದ ಬರೆದಿದ್ದಾರೆ. ಅದಕ್ಕೋಸ್ಕರ ನಾನು ಒಂದು ಉದಿಕೆಮಾಡುತ್ತೇನೆ ಈ ಸಂದರ್ಭದಲ್ಲಿ ನಾನು ಭಾರತದಲ್ಲಿ ಹೇಳಿರತಕ್ಕ ಒಂದು ಕಥೆಯನ್ನು ಹೇಳಬೇಕಾಗಿದೆ. ನೂರಾರು ವರ್ಷಗಳ ವರೆಗೆ ತಪಸ್ಸನ್ನು ಮಾಡಿ ತನ್ನ ತಪಸ್ಸಿನ ಪ್ರಭಾವದಿಂದ ಒಬ್ಬನು ಒಂದು ಹಕ್ಕಿಯನ್ನು ದೂರದಿಂದ ದಿಟ್ಟಿಸಿ ನೋಡಿದ. ತಕ್ಷಣ ಅವನ ತಪಸ್ಸಿನ ಪ್ರಭಾವಶಕ್ತಿಯಿಂದ ಆ ಹಕ್ಕಿ ಸುಟ್ಟು ಹೋಗುತ್ತದೆ. ನಂತರ ಆ ತಪಸ್ವಿಯು ಒಂದು ಊರಿಗೆ ಹೋಗುತ್ತಾನೆ. ಅಲ್ಲಿ ಒಬ್ಬರ ಮನೆಯ ಮುಂದೆ ನಿಂತು 'ಭಿಕ್ಷಾಂ ದೇಹಿ' ಎಂದು ಕೂಗುತ್ತಾನೆ. ಆದರೆ ಒಬ್ಬ ಹೆಂಗಸೂಕೂಡ ಹೊರಗೆ ಬರಲಿಲ್ಲ. ಒಳಗೇ ಇದ್ದರು. ಹೊರಗಡೆ ಯಿಂದಲೇ ಆತ ಒಳಗಿದ್ದ ಹೆಂಗಸನ್ನು ದೃಷ್ಟಿಸಿ ನೋಡುತ್ತಾನೆ. ಆಗ ಆ ಹೆಂಗಸು ನಾನೇನು ಕಾಡಿನಲ್ಲಿರುವ ಹಕ್ಕಿಯಲ್ಲ, ನಿನಗಿನ್ನೂ ಜ್ಞಾನೋದಯವಾಗಿಲ್ಲ. ಹೋಗು ಎಂದು ಹೇಳುತ್ತಾಳೆ. ಆಗ ಆ ತಪಸ್ವಿಗೆ ಆಶ್ಚರ್ಯವಾಯಿತು. ನಾನು ಇಷ್ಟು ದಿವಸ ತಪಸ್ಸುಮಾಡಿದ್ದರೂ ಕೇವಲ ಒಬ್ಬ ಹೆಂಗಸು ನನಗೆ ಇನ್ನೂ ಜ್ಞಾನೋದಯವಾಗಿಲ್ಲ ಎಂದು ಹೇಳಿದ್ದರ ಗುಟ್ಟು ಏನೆಂಬುದನ್ನು ತಿಳಿಸಬೇಕೆಂದು ಋಷಿ ಕೇಳುತ್ತಾನೆ. ಆಗ ಆ ಹೆಣ್ಣು ಮಗಳು ನಿನಗೆ ಇದರ ಗುಟ್ಟು ಏನೆಂಬುದನ್ನು ತಿಳಿಯಬೇಕಾದರೆ ಕಾಡಿನಲ್ಲಿ ಒಬ್ಬ ಧರ್ಮ ವ್ಯಾಧನು ಇದ್ದಾನೆ ಅಲ್ಲಿಗೆ ಹೋಗಿ ಕೇಳು, ಅವನು ಹೇಳುತ್ತಾನೆಂದು ಹೇಳಿದಳು. ಆ ಧರ್ಮವ್ಯಾಧನು ಹೋಗಿ, ನಾನು ಬ್ರಾಹ್ಮಣನಾಗಿ ಒಂದು ಪ್ರಶ್ನೆ ಕೇಳುತ್ತೇನೆಂದು ಹೇಳಿದ.

ಶ್ರೀ ಕಾಗೋಡು ತಿಮ್ಮಪ್ಪ.— ಇದೇನು ಹರಿಕಥೆಯೋ?

ಶ್ರೀ ಎಸ್. ಎಂ. ಶೀರನಾಳಿ ಚಂವ್ರಶೇಖರ್.— ಆಗ ಧರ್ಮವ್ಯಾಧನು ಅವನನ್ನು ಕೂಡಿಸುತ್ತಾನೆ. ಆಗ ಬ್ರಾಹ್ಮಣನು ಮತ್ತೆ ಜ್ಞಾನೋದಯವಾಗಬೇಕಾದರೆ ಅದರ ಗುಟ್ಟೇನು ಎಂದು ಕೇಳುತ್ತಾನೆ. ಅದಕ್ಕೆ ಆ ವ್ಯಾಧನು ಹೇಳುತ್ತಾನೆ, ನಾನು ಹೆಂಗಸರೊಡನೆ ಮಾತನಾಡುವುದಿಲ್ಲ, ಮಾತಾಪಿತೃಗಳ ಸೇವೆ ಮಾಡುತ್ತೇನೆ. ನಾನು ಕೊಳೆತು ಹೋಗಿರತಕ್ಕ ಮಾಂಸವನ್ನು ಮಾರುವುದಿಲ್ಲ, ಸ್ವಚ್ಛವಾದ ಮಾಂಸವನ್ನೇ ಮಾರಾಟಮಾಡುತ್ತೇನೆ. ಅದನ್ನು ನ್ಯಾಯ ಬೆಲೆಗೇ ಕೊಡುತ್ತೇನೆ. ಇದೇ ನನ್ನ ಧರ್ಮದ ಗುಟ್ಟು ಎಂದು ಹೇಳಿದ. ಇದು ಭಾರತದಲ್ಲಿರುವ ಒಂದು ಕಥೆ.

ಹೀಗೆ ಆ ಮಹಾಭಾರತದಲ್ಲಿ ಇನ್ನೂ ಒಂದೂ ಧರ್ಮಪ್ರಧಾನವಾದ ಕಥೆ ಇದೆ. ಜೀವನದಲ್ಲಿ ಕಾಣತಕ್ಕ ಬದಲಾವಣೆಗಳಿಗೆ ಸನ್ನಿವೇಶ ಎಷ್ಟರ ಮಟ್ಟಿಗೆ ಪ್ರಭಾವ ಬೀರುತ್ತದೆಂಬುದನ್ನು ಆದರಲ್ಲಿ ತಿಳಿಸಿದೆ ಒಂದೇ ತಾಯಿಯ ಹೊಟ್ಟೆಯಲ್ಲಿ ಎರಡು ಪಕ್ಷಿಗಳು ಹುಟ್ಟುತ್ತವೆ. ಆ ಎರಡರಲ್ಲಿ ಒಂದು ಋಷ್ಯಾಶ್ರಮವನ್ನು ಸೇರುತ್ತದೆ. ಇನ್ನೊಂದು ಪಕ್ಷಿ ಒಬ್ಬ ಕಟುಕನ ಅಂಗಡಿಯನ್ನು ಸೇರುತ್ತದೆ. ಆ ಕಟುಕನ ಅಂಗಡಿಯನ್ನು ಸೇರಿದ ಪಕ್ಷಿ ಯಾರನ್ನಾದರೂ ಕಂಡ ಕೂಡಲೇ 'ಕಡಿ, ಕತ್ತರಿಸು, ಬಡಿ' ಎಂಬುದಾಗಿ ಹೇಳುತ್ತಿದ್ದರೆ ಇತ್ತ ಆ ಋಷ್ಯಾಶ್ರಮದಲ್ಲಿದ್ದ ಪಕ್ಷಿ ಯಾರನ್ನಾದರೂ ಕಂಡ ಕೂಡಲೆ 'ಬನ್ನಿ ನಿಮಗೆ ಹಸಿವಾಗಿದೆಯೇ ? ಬಾಯಾರಿಕೆಯಾಗಿದೆಯೇ ? ನೀರನ್ನು ಕುಡಿಯಿರಿ, ವಿಶ್ರಮಿಸಿಕೊಳ್ಳಿ. ಎಂದು ಹೇಳುತ್ತಿತ್ತು ಎಂದು ಹೇಳಿದೆ. ಈ ಎರಡು ಪಕ್ಷಿಗಳು ಜನ್ಮತಃ ಒಂದೇ ಆಗಿದ್ದರೂ ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ್ದರೂ ಒಂದೊಂದರ ನಡೆನುಡಿಗಳೂ ಅವುಗಳಿಗಿರತಕ್ಕ ವಾತಾವರಣವನ್ನು ಅನುಸರಿಸಿರುವುದನ್ನು ನಾವಿಲ್ಲಿ ಕಾಣುತ್ತಿದ್ದೇವೆ. ಈ ಕಥೆಯಿಂದ ಏನು ಗೊತ್ತಾಗುತ್ತದೆಂದರೆ ಜಾತಿ ಯಾವುದಕ್ಕೂ ಮುಖ್ಯವಲ್ಲ; ಅವರವರು ಬೆಳೆಯತಕ್ಕ ವಾತಾವರಣವೇ ಪ್ರಮುಖ್ಯವೆಂಬುದಾಗಿ ಗೊತ್ತಾಗುತ್ತದೆ. ಹೀಗೇ ಆ ಮಹಾಭಾರತದಲ್ಲಿ ಇನ್ನೂ ಅನೇಕ ಕಥೆಗಳು ಬರುತ್ತವೆ. ಸಾಮಾನ್ಯವಾಗಿ ನಾವೆಲ್ಲರೂ ತಪ್ಪನ್ನು ಮಾಡತಕ್ಕವರೇ. ನಾವು ಸ್ವಾರ್ಥಕ್ಕಾಗಿ ತಪ್ಪನ್ನು ಮಾಡುತ್ತೇವೆ. ನಾವು ಈ ದಿವಸ ಭಾರತದಲ್ಲಿ ಸಾತ್ಯಾತೀತ ರಾಷ್ಟ್ರವನ್ನು ನಿರ್ಮಾಣ ಮಾಡುತ್ತೇವೆಂದೂ, ಜಾತ್ಯಾತೀತ ಸಮಾಜವನ್ನು ಕಟ್ಟುತ್ತೇವೆಂದೂ ಸಾಯಿಯಲ್ಲಿ ಹೇಳಿಕೊಂಡು ಆಚರಣೆಯಲ್ಲಿ ಯಾವ ಕಛೇರಿಯಲ್ಲಿ ನೋಡಿದರೂ ದೇವರ ಪಠಗಳೇ. ಯಾವ

(ಶ್ರೀ ಎಸ್. ಎಂ. ಶೀರನಾಳಿ)

ದೇವಸ್ಥಾನಕ್ಕೆ ಹೋಗಲಿ ಇಂಥಾ ಪೂಜಾರಿಯೇ ಬರಬೇಕು ಇಂಥ ದೇವಾಲಯದಲ್ಲಿ ಇಂಥಾ ದೇವರ ಪ್ರತಿಷ್ಠೆಯನ್ನೇ ಮಾಡಬೇಕು ಎನ್ನುವುದನ್ನು ಯಾರೂ ಕೈಬಿಟ್ಟಿಲ್ಲ. ಹೀಗಾದರೆ ನಾವು ಎಂದು ಜಾತ್ಯಾತೀತ ರಾಷ್ಟ್ರವನ್ನು ನಿರ್ಮಾಣಮಾಡುವುದು ? "ಚಾತುರ್ವರ್ಣ್ಯಂ ಮಯಸೃಷ್ಟಂ. ಗುಣಕರ್ಮ ವಿಭಾಗಶಃ" ಎಂಬುದಾಗಿ ಗೀತಾಚಾರ್ಯರು ಹೇಳಿದ್ದಾರೆ .....

ಶ್ರೀ ಎಚ್. ಸಿದ್ದವೀರಪ್ಪ (ಆರೋಗ್ಯ ಸಚಿವರು) :—ಈಗ ನೀವೊಬ್ಬ ಹೊಸ ಗೀತಾಚಾರ್ಯರು ಹುಟ್ಟಿದ್ದೀರಿ.

ಶ್ರೀ ಎನ್. ಎಂ. ಶೀರನಹಳ್ಳಿ ಚಂದ್ರಶೇಖರ್ :—ಈ ದಿವಸ ಸಮಾಜದಲ್ಲಿ ಕಾಣತಕ್ಕ ಅಂತರಗಳೆಲ್ಲಾ ಹೋಗಲೇಬೇಕು. ಈ ಅಂತರಗಳನ್ನು ಮತ್ತು ಭಿನ್ನ ಭೇದಗಳನ್ನು ಅಳಿಸಲು ಅನೇಕ ಶರಣರೂ ಸಾಧುಸಂತರೂ ಬಹಳವಾಗಿ ಶ್ರಮಿಸಿದ್ದಾರೆ. ಅದ್ವೈತವನ್ನು ಪ್ರತಿಪಾದನೆ ಮಾಡಿದವರಲ್ಲಿ ಶ್ರೀ ಶಂಕರಾಚಾರ್ಯರೂ ಮತ್ತು ಬಸವಣ್ಣನವರೂ ಹೆಸರನ್ನು ಗಳಿಸಿದ್ದಾರೆ. ಬಸವಣ್ಣನವರೂ "ಇಬ್ಬರಾಡುವ ಮಾತ ಕದ್ದು ಕೇಳುವವ ಹೊಲೆಯ" ಎಂದಿದ್ದಾರೆ. ಮಂತ್ರ ಗಂಡ ಹೆಂಡಿರನ್ನು ಬೇರೆ ಮಾಡುವವ ಹೊಲೆಯ" ಎಂಬುದಾಗಿಯೂ ಹೇಳಿದ್ದಾರೆ. ಆದರೆ ಯಾರೇ ಏನೇ ಮಾಡಿದ್ದರೂ ಅದರಿಂದ ಆಂಥ ಸಾಧನೆಯೇನೂ ಆಗಲಿಲ್ಲ. ಸಮಾಜದಲ್ಲಿ ಇನ್ನೂ ಶೋಷಣೆ ನಡೆಯುತ್ತಲೇ ಇದೆ. ಹಿಂದಿನವರು ಅವರು ಯಾವ ಜಾತಿಯಲ್ಲೇ ಹುಟ್ಟಿದರಲಿ ಅವರು ಎಲರ ಏಳಿಗೆಗೂ ದುಡಿದಿದ್ದಾರೆ ಮತ್ತು ಶ್ರಮಿಸಿದ್ದಾರೆ. ಆದರೆ ಈ ದಿವಸ ಅದನ್ನೆಲ್ಲಾ ಮರೆತು ಆ ತೋಳ—ಕುರಿಮರಿ ಕಥೆಯ ಹಾಗೆ ಯಾವಾಗಲೋ ಈ ಬ್ರಾಹ್ಮಣವರ್ಗ ಸಮಾಜ ಶೋಷಣೆ ಮಾಡಿತೆಂಬ ಕಾರಣ ಇಟ್ಟುಕೊಂಡು ಹಾಗೆ ಯಾವಾಗಲೋ ನಿಮ್ಮ ಅಜ್ಜ ಹಾಗೆ ಮಾಡಿದ್ದ ಹೀಗೆ ಮಾಡಿದ್ದ ಅದುದರಿಂದ ನಾನೂ ನಿನ್ನನ್ನು ತಿನ್ನುತ್ತೇನೆ ಅನ್ನುವ ವಾದ ಸರಿಯಾದುದೇ ? ಮದ್ರಾಸಿನಲ್ಲಿ ಆ ಶ್ರೀ ಸತ್ಯವಾಣಿ ಮುತ್ತೂ ಅವರ ಭಾಷಣವನ್ನು ಓದಿದರೆ ಇದು ಚೆನ್ನಾಗಿ ಅರ್ಥವಾಗುತ್ತದೆ. ಈ ದಿವಸ ಸಮಾಜ ಆ ಹಿಂದಿನ ಹಾದಿಯನ್ನು ಹಿಡಿದು ಹೋಗಬಹುದಕ್ಕೆ ಆಗುವುದಿಲ್ಲ. ಕಾಲಸ್ಥಿತಿಗಳು ಬದಲಾವಣೆಯಾಗಿವೆ. ಆದ್ದರಿಂದ ಹೋಟಲ್‌ಗಳು ಇತ್ಯಾದಿಗಳ ಮುಂದೆ ಹಾಕಿರತಕ್ಕ ನಾಮಫಲಕಗಳು ಹೋಗಬೇಕು. ಹಿಂದೆ ಮಡಿ ಮಡಿ ಎನ್ನುತ್ತಿದ್ದ ಕಾಲ ಹೋಯಿತು. "ಮಡಿ ಮಡಿ ಎನ್ನುತಿಹೆ ಮಡಿ ಎಲ್ಲಿದೆಯೋ—ಜಕನಾಸಿ ?" ಎನ್ನುತ್ತಾರೆ. ನನಗೆ ಈ ದಿವಸ ಚಿತ್ರದುರ್ಗದಿಂದ ನನ್ನ ಸ್ನೇಹಿತರಾದ ಮೂರು ಜನ ಪ್ರಾಧ್ಯಾಪಕರು ನನ್ನ ಕೆಲವು ಪ್ರಬಂಧಗಳನ್ನು ನೋಡಿ ಮೆಚ್ಚಿಕೊಂಡು, ಅವರು ಒಂದು ಪುಸ್ತಕವನ್ನು ಬಹುಮಾನವಾಗಿ ಕಳುಹಿಸಿಕೊಟ್ಟಿದ್ದಾರೆ. ಆ ಪುಸ್ತಕದ ಹೆಸರು 'ದಿಗಂಬರ ಸಂನ್ಯಾಸಿ' ಎಂದು ಈ ಪುಸ್ತಕದಲ್ಲಿ ಬರೆದಿರತಕ್ಕ ಪ್ರತಿಯೊಂದು ಪದವನ್ನೂ ಸುವರ್ಣಾಕ್ಷರದಲ್ಲಿ ಬರೆದಿರಬೇಕು—ಅಷ್ಟು ಚೆನ್ನಾಗಿದೆ ಈ ಪುಸ್ತಕ. ಈ ಪುಸ್ತಕದಲ್ಲಿ ಒಂದು ಕಡೆ ಹೀಗೆ ಹೇಳಿದ್ದಾರೆ :

"ಅಕ್ಷರ ಕಲಿಯದ ಹಳ್ಳಿಗಳು ಶೋಷಣೆಗೊಳಗಾಗಿವೆ
ಎಂದರೆ ಅದು ನಿನಗೆ ಅಶ್ಲೀಲ
ಈ ಜಾತಿಗಳು
ಈ ಕಲಹಗಳು ಯಾಕೆ ಎಂದು ಪ್ರಶ್ನಿಸಿದರೆ
ಅದು ನಿನಗೆ ಅಶ್ಲೀಲ
ಈ ಮತಗಳು
ಈ ಮೌಢ್ಯತೆ ಎಲ್ಲಿಗೊಯ್ಯುತ್ತಿವೆ ಎಂದರೆ
ಅದು ನಿನಗೆ ಅಶ್ಲೀಲ"

ಅವರು ಇನ್ನೊಂದು ಕಡೆ ಇಲ್ಲಿ ಹೀಗೆ ಹೇಳಿದ್ದಾರೆ :—

"ನಾನು ದೇವರನ್ನು ನಂಬುತ್ತೇನೆ
ಹೌದು
ನಾನು ದೆವ್ವಗಳನ್ನು ನಂಬುತ್ತೇನೆ
ದೇವರೆಂದರೆ
ಆಚಾರೋಪಚಾರಗಳಿಂದ ಮುದವೇರಿ ನಿರ್ವಿಕಾರರೆಂದು ಹೇಳುತ್ತಾ
ಅರಿಷಡ್ವರ್ಗಾದಿಗಳಿಗೆ ಮತ್ತಷ್ಟು ದಾಸರಾಗಿ
ಅಹಂಕಾರ ಭೂಯಿಷ್ಠರಾದ ಸ್ವಾಮಿಗಳಿಲ್ಲ
ಪುಳಿಯೋಗರೆ ಮೊಸರನ್ನಗಳಿಂದ ಶರೀರವನ್ನು ಚಿದ್ವಿಲಾಸದಿಂದ
ಬೆಳೆಯಿಸುತ್ತಿರುವ ಪೂಜಾರಿಗಳಲ್ಲ"—

ನಾವು ಸ್ವಾತಂತ್ರ್ಯವನ್ನು ಗಳಿಸಿ ಇಲ್ಲಿಗೆ ೨೫ ವರ್ಷಗಳಾದವು. ಆದರೆ ನಾವಿನ್ನೂ ಜಾತಿಯ ಹೆಸರಿನಲ್ಲಿ ಹೋಟಲುಗಳಿಗೆ ನಾಮಫಲಕಗಳನ್ನು ಹಾಕುತ್ತಿದ್ದೇವೆ. ಕೆಲಸಕ್ಕೆ ಸರ್ಕಾರದವರು ಕರೆಯತಕ್ಕ ಅರ್ಜಿಗಳಲ್ಲಿ ಜಾತಿಗಳನ್ನು ಸೂಚಿಸಬೇಕೆಂದು ಹೇಳುತ್ತಿದ್ದಾರೆ. ಇದನ್ನೆಲ್ಲಾ ನೋಡಿದರೆ ನಾವು ಮತ್ತೆ ನಮ್ಮ ಹಿಂದಿನ ಚರಿತ್ರೆಯನ್ನೇ ಪುನರಾವರ್ತನೆ ಮಾಡುತ್ತಿದ್ದೆವೋ ಏನೋ ಎಂದೆನಿಸುತ್ತಿದೆ. ಆದ್ದರಿಂದ ಕೂಡಲೇ ಹೋಟಲುಗಳ ಮುಂದೆ ಹಾಕಿರತಕ್ಕ ಜಾತಿಸೂಚಕ ಫಲಕಗಳನ್ನು ತೆಗೆದುಹಾಕಬೇಕು. ಅದಕ್ಕಾಗಿ ನಾನು ನಿರ್ಣಯವನ್ನು ತಂದಿದ್ದೇನೆ. ಸಮಾಜದಲ್ಲಿರತಕ್ಕ ಅಂತರಗಳು ಅಳಿಯಬೇಕು. ಶೇಕಡ ೩೦ ಭಾಗ ರಿಸರ್ವ್ ಮಾಡಬೇಕು, ಜಾತಿಯ ವಿಷಯ ನಮೂದು ಮಾಡಬಾರದು ಮುಂತಾದುವುಗಳನ್ನು ಒಪ್ಪಿಕೊಳ್ಳುವುದಾದರೆ ಮುಖ್ಯಮಂತ್ರಿಗಳು ಇದಕ್ಕೆ ಭರವಸೆ ಕೊಡುವುದಾದರೆ ನಾನು ಯಾವ ಸಮಿತಿಯ ಸದಸ್ಯನಾಗುವುದಕ್ಕೆ ಅಥವ ಮಂತ್ರಿಯಾಗಲು ಇಷ್ಟಪಡುವುದಿಲ್ಲ, ನಾನು ಎಂ.ಎಲ್.ಎ. ಆಗಿಯೇ ಮುಂದುವರಿಯುತ್ತೇನೆ ಎಂದು ಸೂಚಿಸಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

11-00 A. M.

MR. DEPUTY SPEAKER .—(in the Chair)

ಶ್ರೀ ಕೆ.ಆರ್ ಶ್ರೀನಿವಾಸಲುನಾಯ್ಡು (ಶಾಂತಿನಗರ) .—ಸನ್ಮಾನ್ಯ ಸಭಾಧ್ಯಕ್ಷರೇ, ಶ್ರೀ ವೀರಸಹಳ್ಳಿ ಚಂದ್ರಶೇಖರ್ ರವರು ತಂದಿರುವ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸಿ ಕೆಲವು ಸಲಹೆಗಳನ್ನು ನೀಡುತ್ತೇನೆ ಜಾತಿಮತಗಳಿಗೆ ಸಂಬಂಧಪಟ್ಟಂತೆ ಹಿಂದೆ ಬೇಕಾದಷ್ಟು ಜಗಳವಾಗಿದೆ, ಯುದ್ಧವಾಗಿದೆ. ಇದಕ್ಕೆ ನಿದರ್ಶನಗಳಿವೆ. ರಾಮಾಯಣವನ್ನು ಓದುವಾಗ ಶ್ರೀರಾಮನು ಅಗಸನ ಮಾತನ್ನು ಕೇಳಿ ತನ್ನ ಹೆಂಡತಿಯಾದ ಸೀತೆಯನ್ನು ಕಾಡಿಗೆ ಕಳಿಸಿದನೆಂಬುದು ಗೊತ್ತಾಗುವುದು. ಭಾರತದಲ್ಲಿ ಏಕಲವ್ಯನಿಗೆ ದ್ರೋಣಾಚಾರ್ಯರು ಧನುರ್ವಿದ್ಯೆಯನ್ನು ಕಲಿಸಲಿಲ್ಲವೆಂದು ನಮೂದಾಗಿದೆ. ಹೀಗೆ ಅನೇಕ ಉದಾಹರಣೆಗಳಿವೆ, ಹಿಂದೆ ಜಾತಿಗಳ ಗೊಂದಲ ತೆಗೆದುಹಾಕಲು ಪ್ರಯತ್ನ ಎಷ್ಟು ಮಾಡಿದರೂ ಅದು ಸಫಲವಾಗಿಲ್ಲ. ಇದಕ್ಕೆ ಕಾರಣ ಕಂಡುಹಿಡಿಯಬೇಕಾಗಿದೆ. ೧೫ನೆಯ ಶತಮಾನದಲ್ಲಿ ಬಸವಣ್ಣನವರು ಅನೇಕ ಪ್ರಯತ್ನಗಳನ್ನು ಮಾಡಿದ್ದಾರೆ, ಕನಕದಾಸರು, ಕಬೀರದಾಸರು, ಸೂರದಾಸರು, ಡಾ॥ ರಾಜಾರಾಮ ಮೋಹನರಾಯ ಅವರು, ಈಶ್ವರಚಂದ್ರರು ಮುಂತಾದವರು ಸಮಾಜ ಸುಧಾರಣೆಗೆ ಬಹಳವಾಗಿ ಪ್ರಯತ್ನಮಾಡಿದ್ದಾರೆ. ಆದರೂ ಕೂಡ ಜಾತಿಗಳ ಪ್ರಶ್ನೆ ಹಾಗೆಯೇ ಉಳಿದುಕೊಂಡಿದೆ. ಇದಕ್ಕೆ ಕಾರಣವೇನು? ಮಹಾತ್ಮ ಗಾಂಧಿಯವರ ಕಾಲದಲ್ಲಿ ಇಂಟರ್ ಕ್ಯಾಸ್ಟ್ ಮ್ಯಾರೇಜ್ ಪದ್ಧತಿ ಜಾರಿಗೆ ಬಂದಿದೆ, ಶ್ರೀ ರಾಜಗೋಪಾಲಚಾರಿಯವರು ಸಹ ಅದಕ್ಕೆ ಬೆಂಬಲ ಕೊಟ್ಟಿದ್ದಾರೆ, ಶ್ರೀಮತಿ ಇಂದಿರಾ ಗಾಂಧಿಯವರ ಉದಾಹರಣೆ ಸಹ ಇದಕ್ಕೆ ಇದೆ. ಹೀಗಿದ್ದರೂ ಜಾತಿಗಳ ಅವಾಂತರ ಹೋಗಿಲ್ಲ. ಡಾ॥ ಅಂಬೇಡ್ಕರ್‌ರವರು ಇದಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು. ಆದರೂ ಈ ಹಾವಳಿ ಹಾಗೆಯೇ ಇರುವುದರಿಂದ ಇದಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು. ಆದರೂ ಈ ಹಾವಳಿ ಹಾಗೆಯೇ ಇರುವುದರಿಂದ ಇದಕ್ಕಾಗಿ ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕು. ಹೋಟಲು, ಹಾಸ್ಟಲು ಮುಂತಾದುವುಗಳ ಮುಂದೆ ಜಾತಿಯ ಹೆಸರಿನ ಬೋರ್ಡ್ ಹಾಕುವುದು ಹೋಗಬೇಕು. ಅವನ್ನು ತೆಗೆದುಹಾಕುವುದು ಒಳ್ಳೆಯದು. ಮಂತ್ರಾಧಿಪತಿಗಳು ಮುಂದೆ ಕಾರ್ಯಕ್ಕೆ ನೆರವಾಗಬೇಕು. ಹಿಂದೂ ಸಮಾಜದಲ್ಲಿ ಒಂದು ಭಯವಿದೆ, ಪ್ರತಿಯೊಂದು ಜಾತಿಯಲ್ಲೂ ಕೆಲವು ಕಷ್ಟಗಳಿವೆ. ಮಂತ್ರಾಧಿಪತಿಗಳು ಮುಂದೆ ನಿಂತು ಏನಾದರೂ ಪ್ರಯತ್ನ ಮಾಡಿದರೆ ಸಾಧ್ಯವೇ ಹೊರತು ಇಡಿವಿಜಿಯಲ್ಲಾಗಿ ಪ್ರಯತ್ನಮಾಡಿದರೆ ಪ್ರಯೋಜನವಾಗುವುದಿಲ್ಲ ಎಂಬುದು ನನ್ನ ಅನುಭವದ ಮಾತು. ಮುರುಘರಾಜೇಂದ್ರ ಮಠ, ಪರಕಾಲ ಮಠ ಮುಂತಾದುವು ಏನಿವೆ ಅವುಗಳ ಅಧಿಪತಿಗಳು ಮುಂದೆ ಬಂದು ಜವಾಬ್ದಾರಿ ವಹಿಸಿಕೊಂಡರೆ ಒಕ್ಕೂಟವಾಗಲು ಸಾಧ್ಯ. ಇಂಟರ್‌ಕ್ಯಾಸ್ಟ್ ಮ್ಯಾರೇಜ್ ವಿಚಾರ ಚಂದ್ರಶೇಖರ್‌ರವರು ಹೇಳಿದ್ದಾರೆ. ಅಂಥಹ ಮದುವೆಗಳು ಸಿಂಧುವೆಂದು ಸರಕಾರ ಸಾರಬೇಕು. ಎಲ್ಲಿಯವರೆಗೆ ಇದೆಲ್ಲವೂ ಆಗುವುದಿಲ್ಲವೋ ಅಲ್ಲಿಯವರೆಗೆ ಏನೂ ಸಾಧಿಸಲು ಸುಧ್ಯವಾಗುವುದಿಲ್ಲ ಎಂದು ಒತ್ತಿ ಹೇಳಬೇಕಾಗಿದೆ. ಅದುದರಿಂದ ಈ ನಿರ್ಣಯವನ್ನು ಸಂಪೂರ್ಣವಾಗಿ ಸ್ವಾಗತಿಸಿ ಸರಕಾರದವರು ಈ ಸಂಬಂಧದಲ್ಲಿ ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಕೈಕೊಳ್ಳುವರು ಎಂದು ನಂಬಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಂಕ್ತಾಯಮಾಡುತ್ತೇನೆ.

†ಶ್ರೀ ಬಾಪುಗೌಡ ರಾಯಪ್ಪ (ಸಹಾಪುರ) ನಮ್ಮ ಮುಂದಿರುವ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ ನಾಲ್ಕು ಮಾತುಗಳನ್ನು ಹೇಳುತ್ತೇನೆ. ಇಂದು ಚಂದ್ರಶೇಖರ್‌ರವರು ತಮ್ಮ ಠರಾವಿನ ಬಗ್ಗೆ ಮನಬಿಚ್ಚಿ ಮಾತನಾಡಿದ್ದಾರೆ. ಸ್ವಾತಂತ್ರ್ಯ ಬಂದು ೨೫ ವರ್ಷಗಳಾದರೂ ವಿದ್ಯಾವಂತರ ಸಂಖ್ಯೆ ಹೆಚ್ಚಾದರೂ ಜಾತಿಯ ಭಾವನೆ ತರುಣರಲ್ಲಿ, ವಿದ್ಯಾವಂತರಲ್ಲಿ ಬೆಳೆಯುತ್ತಿದೆ. ಜಾತ್ಯಾತೀತ ರಾಷ್ಟ್ರ ನಿರ್ಮಾಣ ಮಾಡಬೇಕೆಂದು ಸರಕಾರ ಹೇಳುತ್ತಿದೆ. ಒಂದು ಕಡೆ ಜಾತಿ ಇರಬಾರದು, ಜಾತ್ಯಾತೀತ ರಾಷ್ಟ್ರ

(ಶ್ರೀ ಬಾಪುಗೌಡ ರಾಯಪ್ಪ)

ನಿರ್ಮಾಣವಾಗಬೇಕು ಎನ್ನುವುದು ಇನ್ನೊಂದು ಕಡೆ ಜಾತಿಯ ಆಧಾರದ ಮೇಲೆ ಅನೇಕ ಸಂಸ್ಥೆಗಳನ್ನು ನಡೆಸುವುದು ಕಂಡುಬರುತ್ತಿದೆ. ಹರಿಜನರ ಹಾಸ್ಟಲು, ಲಿಂಗಾಯಿತರ ಹಾಸ್ಟಲು, ಕುರುಬರ ಹಾಸ್ಟಲು ಹೀಗೆ ಜಾತಿಗಳ ಹೆಸರಿನ ಮೇಲೆ ಬೇಕಾದಷ್ಟು ಹಾಸ್ಟಲುಗಳಿವೆ. ಹೀಗಿದ್ದರೆ ಜಾತ್ಯಾತೀತ ರಾಷ್ಟ್ರ ನಿರ್ಮಾಣಮಾಡಬೇಕೆಂಬುದು ಎಷ್ಟುಮಟ್ಟಿಗೆ ಸಾಧ್ಯವಾಗುವುದು ಎಂಬುದನ್ನು ಯೋಚಿಸಬೇಕು. ಸರಕಾರದವರು ಜಾತಿಗಳ ಹೆಸರಿನ ಮೇಲೆ ಇರುವ ಸಂಸ್ಥೆಗಳನ್ನು ನಿರ್ಮೂಲ ಮಾಡಬೇಕು. ಇದಕ್ಕೆ ಕಾಯಿದೆ ತರಬೇಕು ಜಾತಿಯ ಹೆಸರು ಹಾಸ್ಟಲಿಗಿಟ್ಟರೆ ಗ್ರಾಂಟು ಕೊಡುವುದಿಲ್ಲವೆಂದು ಘೋಷಿಸಬೇಕು. ಇಂದು ವಿದ್ಯಾವಂತರಲ್ಲಿ, ಬುದ್ಧಿವಂತರಲ್ಲಿ ಜಾತಿವಾದ ಬೆಳೆಯುತ್ತಿದೆ. ಇಂದು ಬೇಕಾದರೆ ರಾಜ್ಯಾಂಗವನ್ನು ತಿದ್ದುಪಡಿಮಾಡಿ. ಲಗ್ನವಾಗಬೇಕಾದರೆ ಲೈಸೆನ್ಸ್ ಪಡೆಯಬೇಕೆಂದು ಮಾಡಿದರೂ ಪರವಾಗಿಲ್ಲ, ಹಾಗೆ ಮಾಡಿ ಸೇಕಡ ಇಷ್ಟು ಆದರೂ ಇತರ ಜಾತಿಯವರೊಂದಿಗೆ ಲಗ್ನವಾಗಬೇಕು ಎಂದು ಮಾಡಿದರೆ ಉತ್ತಮವಾದ ರಾಷ್ಟ್ರ ನಿರ್ಮಾಣಕ್ಕೆ ನಾಂದಿಯಾಗುವುದು. ಕೆಲವು ಕಾಯಿದೆಗಳನ್ನಾರೂ ಮಾಡಿ ಮುಂದೆ ಜಾತಿಯ ಹೆಸರು ಎಲ್ಲೂ ನಮೂದು ಮಾಡದಂತೆ ನುಂದಿನ ಭವಿಷ್ಯ ಉತ್ತಮವಾಗುವಂತೆ ಒಳ್ಳೆಯ ವಾತಾವರಣ ವುಂಟಾಗುವಂತೆ ಮಾಡಬೇಕೆಂದು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ ಶ್ರೀ ಎಸ್. ವಿ. ನಾಯಕ್ (ಕುಮಟಾ).—ಮಾನ್ಯ ಅಧ್ಯಕ್ಷರೆ, ಈ ಹೆಸರಿನ ಬದಲಾವಣೆಯಿಂದ ನಮ್ಮ ಸಮಾಜ ಸುಧಾರಣೆಯಾಗುವುದಕ್ಕೆ ಸಾಧ್ಯವಿಲ್ಲವೆಂದು ನಾನು ಹೇಳುತ್ತೇನೆ. ನಮ್ಮದು ಸೆಕ್ಯೂಲರ್ ಸ್ಟೇಟ್. ಸೆಕ್ಯೂಲರ್ ಸ್ಟೇಟಿನಲ್ಲಿ ಎಲ್ಲಾ ಜಾತಿಗಳು ಇವೆ. ಇದನ್ನು ಬದಲಾವಣೆ ಮಾಡಿ ಒಂದೇ ರೀತಿ ಹೆಸರಿಡಬೇಕೆಂದರೆ ಅದು ಅಭಾಸವಾಗುತ್ತದೆ. ಇದು ಸಮಾಜದಲ್ಲಿರತಕ್ಕಂತಹ ವ್ಯಕ್ತಿಗಳ ಮನೋವೃತ್ತಿಯ ಮೇಲೆ ಅವಲಂಬಿಸಿಕೊಂಡಿದೆ. ಆ ಮನೋವೃತ್ತಿಯಂ ಬದಲಾವಣೆಯಾದಾಗ ಮಾತ್ರ ಇದು ಸಾಧ್ಯವೇ ಹೊರತು ಬೇರೇನೂ ಅಲ್ಲ. ಇದನ್ನು ಕಾಯಿದೆಯಂ ಮೂಲಕ ಒಮ್ಮೆಲೇ ಬದಲಾಯಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ ಗೊತ್ತುವಳಿಗೆ ನನ್ನ ವಿರೋಧವಿಲ್ಲದಿದ್ದರೂ, ನನ್ನ ಅಭಿಪ್ರಾಯಗಳನ್ನು ಮಾತ್ರ ಹೇಳಬಯಸುತ್ತೇನೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ

† ಶ್ರೀ ಬಿ. ವಿ. ಕಕ್ಕಿಲ್ಲಾಯ (ಬಂಟ್ವಾಳ).—ಅಧ್ಯಕ್ಷರೆ, ನಮ್ಮ ದೇಶದಲ್ಲಿ ಈ ಒಂದು ಜಾತೀಯತೆ ಏನಿದೆ, ಬಹುಶಃ ಇದು ನಮ್ಮ ದೇಶದಲ್ಲಿ ಮಾತ್ರ ಇದೆಯೆಂದು ಕಾಣುತ್ತದೆ. ನಮ್ಮ ಸಮಾಜ ಹಾರಿಸಾಂಟಲ್ ಪ.ತ್ತು ವರ್ಟಿಕಲ್ —ಹೀಗೆ ಎರಡು ರೀತಿಯಲ್ಲಿ ವ್ಯಾಪಿಸಿಕೊಂಡಿವೆ. ವರ್ಗಗಳ ರೀತಿಯಲ್ಲಿ ನಮ್ಮ ಸಮಾಜ ಹಾರಿಸಾಂಟಲ್ ಆಗಿದ್ದು, ಪ್ರತಿಯೊಂದು ವರ್ಗಗಳು ಸಹ ಬೇರೆಬೇರೆ ವರ್ಟಿಕಲ್ ಆಗಿ ವಿಂಗಡಣೆಯಾಗಿದೆ. ಇದನ್ನು ಪರಿಹರಿಸುವ ಪ್ರಯತ್ನ ಅಷ್ಟು ಸುಲಭವಲ್ಲ. ಇದನ್ನು ಪರಿಹರಿಸಬೇಕಾದರೆ ಕೇವಲ ಕೆಲವು ವಿಷಯಗಳನ್ನು ಮಾತ್ರ ಇಲ್ಲಿ ಹೇಳುತ್ತೇನೆ. ಇದನ್ನು ಸಮಾಜದಿಂದ ತೊಡಗಿಸಬೇಕಾದರೆ, ನಮ್ಮಲ್ಲಿ ಸಮಾಜವಾದಕ್ಕೋಸ್ಕರ ಮತ್ತು ನಮ್ಮ ದೇಶದ ಔದ್ಯೋಗೀಕರಣಗಳನ್ನು ಹೆಚ್ಚಿಸುವುದಕ್ಕೋಸ್ಕರ ಏನು ಒಂದು ಪ್ರಯತ್ನ ನಡೆಯುತ್ತಿದೆ ಅದರಲ್ಲಿ ಬದಲಾವಣೆಗಳನ್ನು ಮಾಡಬೇಕು. ಇವತ್ತು ಈ ಔದ್ಯೋಗೀಕರಣಗಳಲ್ಲಿ ಬೆಂಬಲ ಕೊಡುವ ಶಕ್ತಿಗಳೆಂದರೆ ದೇಶದಲ್ಲಿ ದುಡಿಯುವಂತಹ ಜನರು. ಈ ಜನರು ತಮ್ಮ ಸಂಘಟನೆಯಲ್ಲಿ ಮತ್ತು ತಮ್ಮ ಪ್ರಯತ್ನದಲ್ಲಿ ತಮ್ಮ ಜಾತೀಯತೆಯನ್ನು ಆಧಾರವಾಗಿಟ್ಟುಕೊಳ್ಳುವುದನ್ನು ಬಿಟ್ಟು, ವರ್ಗದ ಆಧಾರದಲ್ಲಿ ನಡೆಯುವಂತೆ ಮಾಡಿದರೆ, ಈ ಜಾತೀಯತೆಯನಂ ತೊಲಗಿಸಲು ಸಹಾಯವಾಗುತ್ತದೆಂದು ನಾನಾದರೂ ಹೇಳುತ್ತೇನೆ ಎರಡನೆಯದು ನಮ್ಮಲ್ಲಿ ಜಮಿನಾಂದಾರರ ಪದ್ಧತಿ ಏನಿದೆ, ಅದನ್ನು ತೊಲಗಿಸುವುದಕ್ಕೆ ಸರ್ಕಾರದವರು ಈ ಭೂಸುಧಾರಣೆಯ ಕಾರ್ಯ ಕ್ರಮಗಳನ್ನು ಇನ್ನಷ್ಟು ತೀವ್ರವಾಗಿ ಜಾರಿಗೆ ತಂದು, ಉಳುವ ಜನರಿಗೆ ಜಮಿನು ಕೊಟ್ಟು ಅವನನ್ನೇ ಭೂಮಿಯ ಒಡೆಯನನ್ನಾಗಿ ಮಾಡಿದರೆ ಅದರಿಂದ ಸಹ ಈ ಜಾತೀಯತೆಯನ್ನು ನಿರ್ಮೂಲ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದರ ಕಾರ್ಯಕ್ರಮಗಳನ್ನು ಎಷ್ಟು ಜಾಗ್ರತೆ ಮಾಡುತ್ತೀರೋ ಅಷ್ಟು ಜಾಗ್ರತೆ ನಿಮ್ಮ ಈ ಜಾತೀಯತೆಯನ್ನು ನಿರ್ಮೂಲ ಮಾಡುವುದಕ್ಕೆ ಸಹಾಯವಾಗುತ್ತದೆ. ಹಾಗೆಯೇ ಇಂಡಸ್ಟ್ರಿಯಲೈಸೇಶನ್ ನಮ್ಮದೇಶದಲ್ಲಿ ಈ ಔದ್ಯೋಗೀಕರಣಗಳನ್ನು ಪ್ರಜಾ ಪ್ರಭುತ್ವದ ತಳಹದಿಯ ಮೇಲೆ, ಅಥವಾ ಸಮಾಜವಾದದತಳಹದಿಯ ಮೇಲೆ ಮಾಡುವುದಕ್ಕೆ ಸರ್ಕಾರದವರು ಎಷ್ಟು ಬೇಗ ಮನಸ್ಸು ಮಾಡುತ್ತಾರೆಯೋ, ಅಷ್ಟು ಬೇಗ ಈ ಜಾತೀಯತೆಯ ವೈಷಮ್ಯವನ್ನು ತೊಲಗಿಸುವುದಕ್ಕೆ ಸಹಾಯವಾಗುತ್ತದೆ ಎಂದು ಹೇಳುತ್ತೇನೆ. ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಂದು ಹಳ್ಳಿಯಲ್ಲಿ ಒಬ್ಬ ಮೆಟ್ಟು ಹೊಲಿಯುವುದಕ್ಕೆ ಕೂತುಕೊಂಡರೆ, ಬಹುಶಃ ಅವನಿಗೆ ಆ ಹಳ್ಳಿಯಲ್ಲಿ. ಬಹಳ ಕೀಳು ಮಟ್ಟದ ಸ್ಥಾನ ಜನರು ಕೊಡುತ್ತಾರೆ. ಆದರೆ ಅದೇ ಮೆಟ್ಟು ಹೊಲಿಯುವ ಕೆಲಸವನ್ನು ಬಾಟಾ ಶೂ ಕಂಪೆನಿಯಲ್ಲಿ ಮಾಡುತ್ತಿದ್ದರೆ, ಅಲ್ಲಿ ಅದಕ್ಕೆ ಅಷ್ಟು ಕೀಳು ಮಟ್ಟದ ಬೆಲೆ ಇಲ್ಲ. ಅಲ್ಲಿ

ಒಂದೇ ಜಾತಿಯಲ್ಲ, ಎಲ್ಲಾ ಜಾತಿಯವರೂ ಅದನ್ನುಮಾಡುತ್ತಾರೆ. ಅಲ್ಲಿ ಬ್ರಾಹ್ಮಣರೂ ಇರಬಹುದು ಅಥವಾ ಇತರ ಜಾತಿಯವರು ಇರಬಹುದು. ಅಲ್ಲಿ ಅವನಿಗೆ ಜಾತಿಯ ದೃಷ್ಟಿಯಲ್ಲಿ ಬಹಿಷ್ಕಾರ ಹಾಕುವ ಪ್ರಶ್ನೆ ಬರುವುದಿಲ್ಲ. ಆದ್ದರಿಂದ ನಮ್ಮ ದೇಶದಲ್ಲಿ ಔದ್ಯೋಗೀಕರಣಗಳನ್ನು ಹೆಚ್ಚು ಬೆಳೆಸಿದಷ್ಟೂ ಜಾತೀಯತೆಯನ್ನು ಸಹ ತೊಡೆದು ಹಾಕುವುದಕ್ಕೆ ಸಾಧ್ಯವಾಗುತ್ತದೆ. ಅದಲ್ಲದೆ ನಾವು ಒಂದು ನಿರ್ಣಯ ತೆಗೆದುಕೊಂಡು ಬಂದ ತಕ್ಷಣ ಈದು ನಿರ್ಮೂಲವಾಗುವುದಿಲ್ಲ. ಈ ಜಾತೀಯತೆಯ ಅನಾಹುತ ಸಮಾಜವಾದದ ಬೆಳವಣಿಗೆಗೆ ಅಡ್ಡಿ ಆಂತಕಗಳನ್ನು ತಂದೊಡ್ಡುವುದು. ಆದ್ದರಿಂದ ಕೆಲವು ಮಾನ್ಯ ಸದಸ್ಯರು ಸೂಚಿಸಿದ ಹಾಗೆ ಈದಕ್ಕೆ ಪ್ರತ್ಯೇಕವಾದ ಕಾರ್ಯಕ್ರಮಗಳನ್ನು ಸರ್ಕಾರದವರು ಮತ್ತು ಸಮಾಜದ ನಾಯಕರು ತೆಗೆದುಕೊಂಡು ಬಂದರೆ, ನಿಜವಾಗಿಯೂ ಈ ಜಾತೀಯತೆಯನ್ನು ತೊಲಗಿಸಬಹುದು. ಅದಕ್ಕೆ ಸರ್ಕಾರದವರು ಇನ್ನಷ್ಟು ಹೆಚ್ಚಿನ ಮಹತ್ವವನ್ನು ಪ್ರೋತ್ಸಾಹವನ್ನು ಕೊಡುವಂತೆ ಮಾಡಿ ಈ ಒಂದು ಜಾತೀಯತೆಯ ವ್ಯೆಷಮ್ಯವನ್ನು ಆದಷ್ಟು ಬೇಗ ತೊಲಗಿಸುವುದಕ್ಕೆ ನಾವೆಲ್ಲರೂ ಪ್ರಯತ್ನಿಸ ಬೇಕೆಂದು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಂಗಿಸುತ್ತೇನೆ.

‡SRI J.P. SARWESH (Serum):—Mr: Deputy Speaker, while supporting the Resolution of Sri Chandrasekhar, I would like to say a few words.

Several religious and social reformers in our country tried to eradicate this caste system and this don't-touchism of Hinduism. In this connection we have to remember first Lord Buddha who tried to create a casteless society. But what happened ? Buddhism had to run to China, Ceylon, Burma and to various other countries. In the land of its birth, Buddhism is not existing as a creed today. Of course, some years ago, Dr. Ambedkar again gave a new life to Buddhism. Then we have to remember Raja Rammohan Roy: he also tried to bring a classless society by forming Brahma Samaj. What is its fate today ? It too failed. Swami Dayananda who formed Arya Samaj for the same purpose for fighting the evils of Hinduism, was also defeated in fulfilling his objective. Guru Nanak, the founder of Sikhim, also preached that all human beings are equal. So whoever tried to introduce a new order of castless society or propounded a theory to abolish the hierarchy of castesles, has failed in his mission and the followers of his order have become members of a new caste. So all attempts of the past to eradicate casteism had only resulted in the creation of more religious.

To bring a casteless society, we have to accept that there are only two castes : the working classes and the exploiting class, the rich and the poor, and we have to intensify our propaganda to disseminate this doctrine. No one has truly understood Marxism in India It is only in India that the workers never revolted against their exploiters. Hindus were never united, each caste discriminated against the other. This is the greatest evil in India. We some times charge the Britishers that they ruled by the policy of 'divide and rule' But no where in the world this policy is practised as in India. We have to blame Brahminism for this. By the word 'Brahmin' I do not mean only the people belonging to that old religious order. By Brahmin I mean one who discriminates between one caste and another, between one sect and another. Even among the members of Scheduled

(SRI J. P. SARWESH)

Castes discrimination is practised and so 'Brahminism' is observed even among Scheduled Caste members and some are considered socially unequal to others. The Britishers were taking great pride in calling themselves a great imperial power. An imperial power is committed to exploitation and hatred. Like that, in India also we have today Brahmin imperialists so much so the Brahmins feel they are the sufferers and even the Scheduled Castes think that they are discriminated by other communities and exploited. It is a most disgraceful thing to see man as an imperialist, making distinctions between one human being and another and one caste and another. New ideas are coming in. Now that we are wedded to socialism, our first duty is to reject the caste system. But casteism cannot be eradicated by merely speaking in the Assembly, Seminars and party meetings. We can put down casteism only when we practice what is preached. Casteism is a great hurdle for our progress. We have to take this problem seriously and resolve it. I congratulate Sri Chandrasekhar and conclude.

† ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಪತಿಗಳೆ, ಈ ಸದನದಲ್ಲಿ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಚಂದ್ರಶೇಖರವರು ಒಂದು ಮಹತ್ವಪೂರ್ಣ ವಾದಂತಹ ನಿರ್ಣಯವನ್ನು ತೆಗೆದುಕೊಂಡು ಬಂದಿದ್ದಾರೆ. ಈ ನಿರ್ಣಯವನ್ನು ಈ ಸಭೆ ಕೂಲಂಕಷವಾ, ಚರ್ಚೆ ಮಾಡಿದೆ. ನಿರ್ಣಯದ ಉದ್ದೇಶ ಪವಿತ್ರವಾಗಿದೆ. ಬಹಳ ಕಾಲದಿಂದ ಹಲವು ಮಹಾಪುರುಷರ್ ತತ್ವಜ್ಞಾನಿಗಳು, ರಾಜಕಾರಣಿಗಳು ಮತ್ತು ಸಮಾಜಸೇವಕರು—ಎಲ್ಲರೂ ಕೂಡ ಈ ಬಗ್ಗೆ ಪ್ರಯತ್ನಿಸಿ ಮಾಡಿದ್ದಾರೆ. ಆದರೆ ನಾವು ಇನ್ನೂ ಒಂದು ಘಟ್ಟಕ್ಕೆ ಬಂದಿಲ್ಲ. ಈಗ ತಾನೆ ಈ ಸದನ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನು ಒಮ್ಮತದಿಂದ ಇಟ್ಟಿದೆ.

ಅದು ಚರಿತಾರ್ಹವಾಗಿರತಕ್ಕದ್ದು, ಇತಿಹಾಸದಲ್ಲಿ ಒಂದು ಹೆಜ್ಜೆಯನ್ನು ಮುಂದೆ ಇಟ್ಟಿದ್ದೇವೆ. ಅದೇ ರೀತಿಯಾಗಿ ಮಾನ್ಯ ಸದಸ್ಯರಾದ ಎಸ್. ಎಂ. ಚಂದ್ರಶೇಖರ್ ಅವರು ನಿರ್ಣಯವೇನಿದೆ ಅದು ಜಾತಿಯ ಬಗ್ಗೆ ನಿರ್ಣಯ ತೆಗೆದುಕೊಳ್ಳತಕ್ಕ ಮಹತ್ಸಾಹಸ, ಮಹತ್ಕಾರ್ಯ ಮಾಡಂತ್ತದೆ ಎಂದು ನನ್ನ ಆಸೆ. ಈ ಜಾತಿಗಳ ಬಗ್ಗೆ, ಅದನ್ನು ತೆಗೆದು ಹಾಕಬೇಕೆಂದು ಮಹಾತ್ಮ ಗಾಂಧೀಜಿ ಅವರು ಪ್ರಯತ್ನ ಮಾಡಿದ್ದರು. ಆದರೆ ಅವರೇ ಕೊನೆ ಮಾಡಲಿಲ್ಲ. ಮಹಾತ್ಮ ಗಾಂಧಿಯವರು ಈ ದೇಶದಲ್ಲಿ ಹುಟ್ಟಿರುವ ಯಾರಿಗೂ ತಾರತಮ್ಯವಿರಬಾರದು; ಕನಿಷ್ಠ ಮತ್ತು ಉತ್ತಮ ಎನ್ನತಕ್ಕ ತಾರತಮ್ಯ ಇರಬಾರದು ಎಂದು ಪ್ರಯತ್ನ ಮಾಡಿದರೂ ಕೊನೆ ಕೊನೆಯಲ್ಲಿ ವರ್ಣಾಶ್ರಮ ಧರ್ಮದಲ್ಲಿ ನಂಬಿಕೆ ಇಟ್ಟು ಪ್ರಯತ್ನ ಮಾಡಿದ್ದರಿಂದ ಜಾತಿಗಳು ಹಾಗೆಯೇ ಉಳಿದುಕೊಂಡು ಬಂದವು. ವರ್ಣಾಶ್ರಮದಲ್ಲಿ ನಾಲ್ಕು ಜಾತಿಗಳಿದ್ದರೂ, ಪ್ರತಿಯೊಂದರಲ್ಲಿಯೂ ಸಾವಿರಾರು ಒಳಜಾತಿಗಳು ಇರತಕ್ಕದ್ದು ಈ ದೇಶದ ದೌರ್ಭಾಗ್ಯ. ಮಹಾತ್ಮ ಗಾಂಧೀಜಿಯವರಿಗೆ ಜಾತಿ ಪದ್ಧತಿಯನ್ನು ತೆಗೆದುಹಾಕಬೇಕೆಂಬ ಇಚ್ಛೆ ಇತ್ತು. ವರ್ಣಾಶ್ರಮ ಧರ್ಮದಿಂದ ಏನು ಪ್ರಾರಂಭವಾಯಿತು ಎಂದರೆ, ಸಾಧಾರಣ ಜಾತಿಗಳಾದುವು ಎನ್ನುವುದು ಅವರ ಮನಸ್ಸಿಗೆ ಭಾಸವಾಯಿತು. ಆದರೆ ಅದರ ಬುಡವನ್ನು ತೆಗೆಯುವುದಕ್ಕೆ ನಾವು ಪ್ರಾರಂಭ ಮಾಡಿಲಿಲ್ಲ ಎಂದು ಮಾತ್ರ ನಾನು ಈಗ ಹೇಳುತ್ತಿದ್ದೇನೆ. ಜವಹರಲಾಲ ನಹರೂ ಅವರು ಈ ದೇಶದ ಪ್ರಧಾನ ಮಂತ್ರಿಗಳಾದರು. ಅವರಾದರೂ ಜಾತಿಯನ್ನು ತೆಗೆದುಹಾಕತಕ್ಕ ಸಾಹಸವನ್ನು ಮಾಡಬಹುದಾಗಿತ್ತು. ಆವರು ಕೂಡ ಮಾಡಲಿಲ್ಲ. ನಾನು ಒಂದು ವಿಷಯವನ್ನು ಹೇಳಬೇಕೆಂದು ಇದ್ದೇನೆ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಸರ್ವಶಕ್ತವಾಗಿರುವುದಕ್ಕೆ ನಮ್ಮ ದೇಶದಲ್ಲಿ ಒಂದೇ ಒಂದು ಕಾಂಗ್ರೆಸ್ ಸರ್ಕಾರವಿದೆ. ತಾವು ಮನಸ್ಸು ಮಾಡಿದರೆ ! ಈ ದೇಶದಲ್ಲಿ ಜಾತಿಯನ್ನು ನಿರ್ಮೂಲ ಮಾಡಬಹುದು ಎಂದು ನಾನು ಜವಹರಲಾಲ ನೆಹರೂ ಅವರಿಗೆ ಒಂದು ಕಾಗದವನ್ನು ಬರೆದಿದ್ದೆ. ನನಗೆ ಅದಕ್ಕೆ ಉತ್ತರ ಬರಲಿಲ್ಲ. ಅವರು ಫೈದರಾಬಾದಿಗೆ ಬಂದಾಗ ಇಂಗ್ಲೀಷ್ ಭಾಷೆ ವಿಚಾರದಲ್ಲಿ ಹೇಳಿದರು: 'I will do away with this English first and then with the caste system in India' ಎಂದು.

ಈ ದೇಶದಲ್ಲಿ ಏನಾಯಿತು ಎಂದರೆ ಇಂಗ್ಲೀಷ್ ಭಾಷೆ ಉಳಿಯಿತು, ಹೀಗಾಗಿ ನಮ್ಮ ದೇಶದಲ್ಲಿ ದ್ವಂದ್ವ ಭಾವನೆ, ಆಡುವುದು ಮಾಡುವುದು ಎಂದು ಏನಿದೆ ಅದು ನಮ್ಮ ರಕ್ತಗತವಾಗಿ ಬಂದಿದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ನಾವು ಜಾತಿಯನ್ನು ನಿರ್ಮೂಲ ಮಾಡುವುದಕ್ಕೆ ಪ್ರಯತ್ನ ಮಾಡಿದ್ದರೆ ಈ ಹೊತ್ತಿಗೆ ಒಂದು ಘಟ್ಟಕ್ಕೆ ಬರುತ್ತಿದ್ದೆವೋ ಏನೋ ಎನ್ನುವ ನಿರೀಕ್ಷೆ ನನಗೆ ಇದೆ. ಮಾನ್ಯ ಚಂದ್ರಶೇಖರ್ ಅವರು ಎತ್ತಿರುವ ಕೆಲವು ವಿಷಯಗಳಿಗೆ ಉತ್ತರ ಕೊಡುವುದಕ್ಕೆ ಮೊದಲು ರಾಜ್ಯಾಂಗದಲ್ಲಿರುವ ಕೆಲವು ಕಲಮುಂಗಳನ್ನು ಉದ್ಧರಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

Art. 17 : "Untouchability is abolished and its practice in any form is forbidden."

ಇಲ್ಲಿ ಅಸ್ಪೃಶ್ಯತೆಯನ್ನು ನಿವಾರಣೆ ಮಾಡಬೇಕು ಎಂದು ಹೇಳಿದ್ದಾರೆ. ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕಿಂತ ಮುಂಚಿತವಾಗಿ ಜಾತಿಯನ್ನು ನಿರ್ಮೂಲ ಮಾಡುವುದಕ್ಕೆ ಹೋಗಲಿಲ್ಲ. ಅಸ್ಪೃಶ್ಯತೆ ಜಾತಿಯನ್ನು ಬಿಟ್ಟು ಇರಲಿಕ್ಕೆ ಅಸ್ತಿತ್ವವಿಲ್ಲ. ಯಾರೋ ಒಬ್ಬ ಹೊಲೆಯ, ಮಾದಿಗ, ಚಮ್ಮಾರ ಎಂದು ಕರೆಯುವಾಗ, ಆಸ್ಪೃಶ್ಯದ ಕಳಂಕ ಆಡದ ಹೊರತಾಗಿ ಅದನ್ನು ಹೇಳುವ ಮುಂಚಿತವಾಗಿ ಆ ಕಳಂಕ ಅಂಟತಕ್ಕುದ್ದು ಪ್ರಮೇಯ ಬರುವುದಿಲ್ಲ. ಅಸ್ಪೃಶ್ಯತೆ ಎನ್ನತಕ್ಕುದ್ದು ಒಂದು ಮರದ ಕೊಂಬೆ ಇದ್ದ ಹಾಗೆ. ನಾವು ಕೊಂಬೆಯನ್ನು ಕಡಿಯುವುದಕ್ಕೆ ಪ್ರಯತ್ನ ಮಾಡಿದ್ದೇವೆಯೇ ಹೊರತು ಮರವನ್ನು ಕಡಿಯುವುದಕ್ಕೆ ಪ್ರಯತ್ನ ಮಾಡಲಿಲ್ಲ.

ನನ್ನ ವಾದವನ್ನು ಬೆಳೆಸುವುದಕ್ಕೆ ಮುಂಚಿತವಾಗಿ ೧೫ನೇ ಕಲಂ ನಾನು ಉದ್ಧರಿಸುತ್ತೇನೆ.

"The State shall not discriminate against any citizen on grounds only of religion, race, caste, sex, place of birth or any of them."

ಇಲ್ಲಿ ಜಾತಿ, ಮತ್ತೆ ಸೆಕ್ಸ್, ಲಿಂಗ ಮತ್ತು ಧರ್ಮ, ಅವರು ಹುಟ್ಟಿರತಕ್ಕುದು, ಇದರ ಮೇಲೆ ಯಾರನ್ನೂ ಕೂಡ ತಾರತಮ್ಯ ಮಾಡಬಾರದು ಎಂದು ಉಲ್ಲೇಖಿಸಲ್ಪಟ್ಟಿದೆ. ಹೀಗಿದ್ದಾಗ ಜಾತಿಗಳನ್ನು ರಾಜ್ಯಾಂಗದಲ್ಲಿ ಸ್ಪಷ್ಟವಾಗಿ, ನಿರ್ದಿಷ್ಟವಾಗಿ ತೆಗೆದುಹಾಕಿದ ಹಾಗೆ ಆಗಲಿಲ್ಲ. ಮತ್ತೆ ಜಾತಿಗಳನ್ನು ಕೂಡ ಒಪ್ಪಿಕೊಳ್ಳದೆ ಹೋದರೂ ಕೂಡ ಜಾತಿಯನ್ನು ತೆಗೆದುಹಾಕಿರುವ ಉಲ್ಲೇಖವಿಲ್ಲ. ಎಂದರೆ ೧೭ನೇ ಕಲಂನಲ್ಲಿ ಮತ್ತು ೧೫ನೇ ಕಲಂನಲ್ಲಿ ಏನು ಉಲ್ಲೇಖಿಸಿವಿದೆ, ಇವೆರಡನ್ನೂ ಓದಿಕೊಂಡಾಗ, ರಾಜ್ಯಾಂಗದ ತಂದೆ ಎಂದು ಏನು ಹೇಳುತ್ತಾರೆ, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಅಧ್ಯಕ್ಷರಾಗಿದ್ದರು ಎಂದು ನಾನು ಹೇಳುತ್ತೇನೆ. ಅವರು ಅಸ್ಪೃಶ್ಯತೆ ಹೋಗಬೇಕೆಂದು ಹೋರಾಡುವುದಕ್ಕಿಂತಲೂ ಜಾತಿ ಹೋಗ ಬೇಕೆಂದು ಹೋರಾಡಿದ್ದರು. ಬಾಬಾ ಸಾಹೇಬರನ್ನು ತೃಪ್ತಿಪಡಿಸುವುದಕ್ಕೆ ೧೭ನೇ ಕಲಂ ಸೇರಿಸಲ್ಪಟ್ಟಿತು ಎಂದು ನನ್ನ ಭಾವನೆ. ಬೇರೆಯವರು ಜಾತಿಯನ್ನು ತೆಗೆಯುವುದಕ್ಕೆ ಒಪ್ಪದೆ ಇದ್ದುದರಿಂದ ಜಾತಿಗಳನ್ನು ಕೂಡ ಆದೇ ರೀತಿಯಲ್ಲಿ, ಅನೂಚಾನವಾಗಿ ಏನು ಬಂದಿತ್ತೋ ಅದನ್ನು ಇಟ್ಟುಕೊಳ್ಳಬೇಕಾಯಿತು ಎಂದು ಕಾಣುತ್ತದೆ. ಆ ಒಂದು ಆಧಾರದ ಮೇಲೆ ಯಾವ ಮನುಷ್ಯನಿಗೂ ಭೇದಭಾವನೆಯಿಂದ ನೋಡ ಬಾರದು ಎಂದು ಬೇರೆ ಕಲಮುಗಳನ್ನು ಹಾಕಿರುವುದು ವ್ಯಕ್ತವಾಗುತ್ತದೆ. ನಮ್ಮ ರಾಜ್ಯಾಂಗದಲ್ಲಿ ಜಾತಿಯ ಬಗ್ಗೆ ಒಂದಂ ನಿರ್ಧಾರವನ್ನು ತೆಗೆದುಕೊಳ್ಳದೆ ಇರುವುದು ನಮ್ಮ ದೇಶಕ್ಕೆ ದುರದೃಷ್ಟಕರವೆಂದು ಹೇಳುತ್ತೇನೆ. ಸ್ಪಷ್ಟವಾದ ಭಾವನೆ, ಸ್ಪಷ್ಟವಾದ ಉದ್ದೇಶ, ಪವಿತ್ರವಾದ ಉದ್ದೇಶ, ದೇಶಭಕ್ತಿತನ ವಿದ್ದಿದ್ದರೆ, ೧೭ನೇ ಕಲಂ ಏನಿದೆ ಅದನ್ನು ಹೀಗೆ ಬರೆಯಬಹುದಾಗಿತ್ತು:

Article 17 provides that 'untouchability' is abolished and its practice in any form is forbidden. Instead of that, if it had been provided that 'caste is abolished and its practice in any form is forbidden', it would have been better.

ಅವರು ಈ ರೀತಿಯಾಗಿ ನಿರೂಪಣೆ ಮಾಡಿದ್ದರೆ ನಾವು ಜಾತಿಗಳನ್ನು ಇದುವರೆಗೂ ಕಟ್ಟಿಕೊಂಡು ಬರತಕ್ಕ ಪ್ರಮೇಯ ಬರುತ್ತಿರಲಿಲ್ಲ. ಆಗ ನಮ್ಮ ಪೂರ್ವಿಕರು, ರಾಜ್ಯಾಂಗವನು ಏನು ಬರೆದಿದ್ದಾರೆ ಅವರು ಜಾತಿಗಳ ಬಗ್ಗೆ ನಿರ್ದಿಷ್ಟವಾಗಿರತಕ್ಕ ನಿಲುವನ್ನು ತೆಗೆದುಕೊಳ್ಳದೆ ಇರುವುದೇ ಈ ಸಂಕಟದ ಸಂದರ್ಭಕ್ಕೆ ಎಡೆ ಕೊಟ್ಟಿದೆ, ಆದುದರಿಂದ ನಾವು ರಾಜ್ಯಾಂಗದಲ್ಲಿ ಜಾತಿಯ ಬಗ್ಗೆ ಒಂದು ತಿದ್ದುಪಡಿಯನ್ನು ತಂದು ಬದಲಾಯಿಸತಕ್ಕ ಕ್ರಮವನ್ನು ತೆಗೆದುಕೊಳ್ಳದೆ ಹೋದರೆ ಜಾತಿಯನ್ನು ತೆಗೆದುಹಾಕತಕ್ಕ ಪ್ರಶ್ನೆ ಬರುವುದಿಲ್ಲ. ಜಾತಿಗಳನ್ನು ತೆಗೆದುಹಾಕಿಲ್ಲ ಎಂದು ಹೇಳಿದಾಗ ಜಾತಿಗಳ ಫಲಕ ಇಡಬೇಡಿ ಎನ್ನುವುದು

(ಶ್ರೀ ಬಿ. ಬಸವಲಿಂಗಪ್ಪ)

ಕೂಡ ಅಷ್ಟು ಸ್ಪಷ್ಟವಾಗಿರತಕ್ಕ ನಮ್ಮ ನಿಲುವು ಆಗಂವುದಿಲ್ಲ. ನಾಳೆ ದಿವಸ ಯಾರೂ ಕೂಡ ಯಾವ ಫಲಕಗಳಲ್ಲಿಯು ಜಾತಿ ಹಾಕಬಾರದು ಎಂದು ಹೇಳುತ್ತೇವೆಂದು ಇಟ್ಟುಕೊಳ್ಳೋಣ. ನಾವು ತೆಗೆಯುವುದಿಲ್ಲವೆಂದು ಅವರು ಹೇಳಿದರೆ, ನೀವು ತೆಗೆಯಲೇಬೇಕು ಎಂದು ನಿರ್ಬಂಧ ಮಾಡಿ ಕಾನೂನು ಮಾಡುವುದಾದರೆ, ಎಲ್ಲರೂ ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತೆಗೆದುಕೊಂಡು ಬಂದು ಅಂಥದೇ ಫಲಕ ಪ್ರದರ್ಶನ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ನಮ್ಮ ದೇಶದ ದೌರ್ಭಾಗ್ಯ ವೇನೆಂದರೆ ಜಾತಿ ಬರಬಾರದು ಎಂದು ಭಾಷಣ ಮಾಡುತ್ತಾರೆ. ಆ ಭಾಷಣ ಮಾಡಿದ ಜನರು ಯಾರೂ ಜಾತಿ ಬಿಟ್ಟಿಲ್ಲ. ಅವರು ತಮ್ಮ ಹೆಣ್ಣು ಮತ್ತು ಗಂಡು ಮಕ್ಕಳ ವಂದುವೆಯಂನ್ನು ತಮ್ಮ ತಮ್ಮ ಜಾತಿಯವರಲ್ಲೇ ಮಾಡಿಕೊಳ್ಳುತ್ತಿದ್ದಾರೆ. ಪ್ಲಾಟ್‌ಫಾರಂ ಮೇಲೆ ಬೇಕಾದಷ್ಟು ಭಾಷಣ ಮಾಡಿ ಮನೆಗೆ ಹೋದ ಕೂಡಲೇ ಬೇರೆ ಭಾವನೆ ತಳೆಯುತ್ತಾರೆ ; ಪುರಾಣದ ಬದನೆಕಾಯಿ ಪ್ರಕಾರ ಆಚರಣೆ ಮಾಡುತ್ತಾರೆ.

11-30 A.M.

ಒಬ್ಬ ಹರಿಕಥೆ ಮಾಡುವವನು, ಯಾರೂ ಕೂಡ ಬದನೆಕಾಯಿ ತಿನ್ನಬಾರದು, ಅದರಿಂದ ರೋಗ ರುಜಿನಗಳು ಅಂಟಿಕೊಳ್ಳುತ್ತವೆ ಎಂದು ಉಪದೇಶ ಮಾಡಿದನು. ಮಾರನೆಯ ದಿನ ಬೆಳಿಗ್ಗೆ, ಒಬ್ಬನು ಸೊಗಸಾದ ಬದನೆಕಾಯನ್ನು ಹೊತ್ತುಕೊಂಡು ಬರುತ್ತಿದ್ದುದನ್ನು ನೋಡಿ ಇವನು ಒಂದು ರೂಪಾಯಿನ ಬದನೇಕಾಯನ್ನು ತೆಗೆದುಕೊಂಡು ಮನೆಗೆ ಹೋದ. ಮನೆಯಲ್ಲಿ ಹರಿಕಥೆ ಮಾಡುವವನ ಹೆಂಡತಿ ರಾತ್ರಿಯಲ್ಲಾಬದನೆಕಾಯಿ ತಿನ್ನಬಾರದು ಎಂದು ಉಪದೇಶ ಮಾಡಿದಿರಿ, ಈಗ ಒಂದು ರೂಪಾಯಿನ ಬದನೆಕಾಯಿ ತಂದಿದ್ದಿರಲ್ಲ ಎಂದು ಕೇಳಿದಳು,ಅದಕ್ಕೆ ಅವನು ಬದನೆಕಾಯಿ ನೋಡಲಿಕ್ಕೆ ಬಹಳ ಚೆನ್ನಾಗಿತ್ತು, ಎಣ್ಣೆಗಾಯಿ ಬಹಳ ಚೆನ್ನಾಗಿರುತ್ತದೆ ಎಂದು ತಂದಿದ್ದೇನೆ ಎಂದ. ಮತ್ತು ಆ ಬದನೆಕಾಯಿ ಪುರಾಣದ ಬದನೆಕಾಯಿ, ಇದು ತಿನ್ನುವ ಬದನೆಕಾಯಿ ಎಂದು ಹೇಳಿದ. ಆದ್ದರಿಂದ ನಮ್ಮ ದೇಶದಲ್ಲಿ ನಮ್ಮ ನಾಯಕರಲ್ಲಿ ದ್ವಂದ್ವ ಪ್ರವೃತ್ತಿ ಬೆಳೆದು ಬಂದಿದೆ. ಜಾತಿಯ ಮೇಲೆ ಇವರು ಹೇಳತಕ್ಕದ್ದು ಒಂದು. ಮಾಡತಕ್ಕದು ಒಂದು. ಇಂಥ ಒಂದು ರೀತಿಯಾದ ಪ್ರವೃತ್ತಿಯನ್ನು ಇನ್ನೂ ಆಚರಣೆ ಮಾಡಿಕೊಂಡು ಬಂದಿದ್ದಾರೆ. ಮುಖ ಕನ್ನಡಿಯಲ್ಲಿ ಹೇಗೆ ಕಾಣುತ್ತದೆಯೋ ಹಾಗೆ ರಾಜ್ಯಾಂಗವನ್ನು ಓದಿದರೆ ದ್ವಂದ್ವ ಪ್ರವೃತ್ತಿ ಕಾಣುತ್ತದೆ. ಜಾತಿ ಇದ್ದರೆ ಅನ್‌ಟಚಬಿಲಿಟಿ ಬರುತ್ತದೆ, ಜಾತಿ ಇಟ್ಟುಕೊಂಡು ಅನ್‌ಟಚಬಿಲಿಟಿ ಹೋಗುವ ಪ್ರಶ್ನೆ ಬರುವುದಿಲ್ಲ. ನಾವು ನಿರ್ದಿಷ್ಟವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು: ಮತ್ತು ರಾಜ್ಯಾಂಗವನ್ನು ಬದಲಾವಣೆ ಮಾಡಬೇಕು. ಈ ಕ್ಯಾಸ್ಟ್ ಅನ್ನು ನಿರ್ದಿಷ್ಟವಾಗಿ ತೆಗೆಯಬೇಕು. ಈ ಒಂದು ಕೆಲಸ ಮಹಾ ಪ್ರಧಾನಿಯಾಗಿರತಕ್ಕ ಶ್ರೀಮತಿ ಇಂದಿರಾಗಾಂಧಿಯವರ ಶಕ್ತಿಗೆ ಒಳಪಟ್ಟಿದ್ದು ಎಂದು ಮಾತ್ರ ಹೇಳುತ್ತೇನೆ. ಅವರು ಪ್ರಧಾನಿಗಳಾದಮೇಲೆ ಎಷ್ಟೋ ಮಹಾತ್ಕಾರ್ಯಗಳನ್ನು ಸಾಧನೆ ಮಾಡಿದ್ದಾರೆ. ಇದು ಅವರಿಗೆ ಸಣ್ಣ ಬಹಳವಿಷಯ ಈ ವಿಷಯದ ಬಗ್ಗೆ ಶ್ರೀಮತಿ ಇಂಧಿರಾಗಾಂಧಿಯವರನ್ನು ವಿರೋಧ ಮಾಡಲಿಕ್ಕೆ ಯಾರೂ ಪ್ರಯತ್ನ ಮಾಡುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ, ಇಂಧಿರಾಗಾಂಧಿಯವರು ಒಂದು ಧಿಟ್ಟ ನಿಲುವನ್ನು ತೆಗೆದುಕೊಂಡು ಈ ಜಾತಿಯನ್ನು ನಿರ್ಮೂಲನ ಮಾಡುವುದಕ್ಕೆ ಕಾರ್ಯಕ್ರಮ ತೆಗೆದು ಕೊಳ್ಳವ ನಿರ್ಧಾರವನ್ನು ಅವರು ಮಾಡಬೇಕು ಎಂದು ತಮ್ಮ ಮುಖಾಂತರ ಇಷ್ಟೆ ಮಾತ್ರ ಹೇಳಿ, ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲಾ ಅಲ್ಲಿಗೆ ಬಿಟ್ಟುಬಿಡಿ.

ಶ್ರೀ ಬಿ ಬಸವಲಿಂಗಪ್ಪ.—ಮಾನ್ಯ ಸದಸ್ಯರಾದ ಶ್ರೀವಾನ್ ಚಂದ್ರಶೇಖರ್ ಅವರು ಏನು ಒಂದು ನಿರ್ಣಯವನ್ನು ತಂದಿದ್ದಾರೆ ಅದು ಮಹತ್ವಪೂರಿತವಾದಂಥಾದ್ದು. ಅವರ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದರೂ ಕೂಡ ಈ ಒಂದು ನಿರ್ಣಯವನ್ನು, ಜಾತೀಯತೆ ಹೋಗಬೇಕು ಎನ್ನುವ ಸದುದ್ದೇಶದಿಂದ ತಂದಿದ್ದಾರೆ. ಅದಕ್ಕೆ ನಾನು ಅವರಿಗೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ. ಬೇರೆಯವರು ತಂದಿದ್ದರೆ, ಅವರು ಒಂದು ಅಪಹಾಸ್ಯಕ್ಕೆ ಈಡಾಗುತ್ತಿದ್ದರು. ದೇಶದಲ್ಲಿ ಜಾತೀಯತೆ ಇರಕೂಡದು. ದೊಡ್ಡವನು, ಚಿಕ್ಕವನು ಎಂದು ಇರಕೂಡದು. ಈ ಆಧಾರದ ಮೇಲೆ. ಲಾಭವನ್ನಾಗಲೀ, ನಷ್ಟವನ್ನಾಗಲೀ ಪಡೆಯ ಬಾರದು ಎನ್ನುವ ಪವಿತ್ರವಾದ ಉದ್ದೇಶದಿಂದ ಅವರು ಈ ನಿರ್ಣಯವನ್ನು ತಂದಿದ್ದಾರೆ. ದೇಶದಲ್ಲಿ ಬಹಳ ಕಾಲದಿಂದ ಬಂದಿರತಕ್ಕ ಈ ಮಡಿವಂತಿಕೆ ಹೋಗಬೇಕು. ಜಾತಿ ಎನ್ನತಕ್ಕದ್ದು ಮನುಷ್ಯ ಕರೆದು ಕೊಂಡಿರತಕ್ಕ ಮಡಿವಂತಿಕೆ. ಇನ್ನೊಂದು, ಈ ಜಾತೀಯ ಆಧಾರದ ಮೇಲೆ ಲಾಭದಾಯಕವಾದ ಜೀವನ ಮಾಡುತ್ತಾರೆ, ಇದು ಕೊನೆಗಾಣಬೇಕು.ಇದು ಅಪ್ರಯೋಜನ,ಲಾಭದಾಯಕವಲ್ಲ ಎಂದು ದೇಶಕ್ಕೆ,

ಸಮಾಜಕ್ಕೆ ಗೊತ್ತಾಗುತ್ತದೆ ಎಂದು ನನಗನ್ನಿಸುತ್ತದೆ. ಎಲ್ಲಾ ಜಾತಿಯೂ ಕೂಡ, ಜಾತಿಯಂನ್ನು ಕಟ್ಟಿಕೊಂಡು ಮುಂದುವರಿಯುವುದಕ್ಕೆ ಸಾಧ್ಯವಿಲ್ಲ ಎಂದು ನನ್ನ ಭಾವನೆ. ಇದಕ್ಕೆ ಮಾನ್ಯ ಸದಸ್ಯರಾದ ಚಂದ್ರಶೇಖರ್ ಅವರು ಹಲವಾರು ನಿದರ್ಶನಗಳನ್ನು ಕೊಟ್ಟಿದ್ದಾರೆ. ಹೋಟೆಲುಗಳ ಮುಂಭಾಗದಲ್ಲಿರುವ ನಾಮಫಲಕಗಳ ಬಗ್ಗೆ ಅವರು ಹೇಳಿದ್ದಾರೆ, ಇದು ಹೋಗಬೇಕು ಎನ್ನುವ ಇಚ್ಛೆ ಅವರಿಗೂ ಇದೆ, ನನಗೂ ಇದೆ. ಮುಂದೆ ನಾವು ಮುನಿಸಿಪಾಲಿಟಿಗಳ ಮುಖಾಂತರ ಲೈಸನ್ಸ್ ಕೊಡುವ ಮುಂಚೆ, ಈ ಹೋಟೆಲುಗಳವರಿಗೆ ಇದರ ಬಗ್ಗೆ ಏನು ನಿರ್ಬಂಧ ಹಾಕುವುದು ಎನ್ನುವುದನ್ನು ಯೋಚನೆ ಮಾಡುತ್ತಿದ್ದೇವೆ. ಮುನಿಸಿಪಾಲಿಟಿಗಳ ಬೈಲಾದಲ್ಲಿ ನಿಯಮಗಳನ್ನು ಬದಲಾವಣೆಮಾಡಿ ಈ ನಿರ್ಬಂಧವನ್ನು ಸಾಕಬೇಕೇ ಎನ್ನುವುದನ್ನು ಯೋಚನೆ ಮಾಡುತ್ತೇವೆ. ಮತ್ತು ಕಾನೂನು ಪ್ರಕಾರ ತಿದ್ದುಪಡಿ ತಂದು ಬದಲಾವಣೆ ಮಾಡಬೇಕೇ ಎಂದು ಸಹ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಕೆ. ಪ್ರಭಾಕರ (ವರ್ತೂರು).—ಮದ್ರಾಸ್‌ನಲ್ಲಿ ಬೇರೆ ರೂಪದಲ್ಲಿ ಹೆಲ್ತ್ ಕಿಚನ್, ಎಂದು ಇಡುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ನೋಡೋಣ, ಒಳ್ಳೆಯ ಕೆಲಸ ಸಾರ್ಥಕವಾಗಿದ್ದರೆ ಅದನ್ನು ಅನುಕರಣೆ ಮಾಡಲಿಕ್ಕೆ ನನ್ನ ಅಭ್ಯಂತರವಿಲ್ಲ. ಇನ್ನೊಂದು ವಿಷಯವನ್ನು ಅವರು ಹೇಳಿದ್ದಾರೆ, ಸರ್ಕಾರಿ ಆಫೀಸುಗಳಲ್ಲಿ, ಪೂಜೆ ಪುನಸ್ಕಾರ ಮಾಡಿ, ಒಬ್ಬ ಜಾತಿಯ ಮನುಷ್ಯನಿಂದ ನೈವೇದ್ಯ ಮಾಡಿಸುತ್ತಾರೆಂದು ಹೇಳಿದ್ದಾರೆ. ಇದು ಸಲ್ಲದ ವರ್ತನೆ. ಆಫೀಸುಗಳಲ್ಲಿ ಮುಸಲ್ಮಾನರು ಇರುತ್ತಾರೆ, ಕ್ರಿಶ್ಚಿಯನ್ನರು ಇರುತ್ತಾರೆ, ಇನ್ನೊಬ್ಬ ಜಾತಿಯವರು ಇರುತ್ತಾರೆ. ನಮ್ಮ ಸೆಕ್ರೆಟರಿಯೇಟ್‌ನಲ್ಲಿ ಪ್ರತಿಯೊಂದು ಜಾತಿಗೂ ಸೇರಿದವರು ಇದ್ದಾರೆ. ಒಂದು ಜಾತಿಯವನಿಂದ ಪೂಜೆ ಮಾಡಿಸಿ ನೈವೇದ್ಯ ಮಾಡಿ, ಫಲ ಹಂಚಿಕೊಂಡು ತಿನ್ನತಕ್ಕ ಅಭ್ಯಾಸ ನಮ್ಮ ಸರ್ಕಾರಿ ಕಛೇರಿಗಳಲ್ಲಿ ಹೋಗತಕ್ಕದ್ದು ಬಹಳ ಅನಿವಾರ್ಯ ಎಂದು ನನ್ನ ಆಸ್ಪೆ. ಸರ್ಕಾರ ಹುಕುಂ ಮಾಡುವುದಕ್ಕೆ ಮುಂಚೆ, ಇವರು ಮನೆಯಲ್ಲಿ ಪೂಜೆ, ಪುನಸ್ಕಾರ ಮಾಡಿಕೊಂಡು ಆಫೀಸಿಗೆ ಬರಲಿ ಎಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದರ ಬಗ್ಗೆ ತಾವು ಒಂದು ನಿರ್ದೇಶನ ಕೊಡಬೇಕು.

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೇಳುತ್ತೇನೆ, ಇದು ಸಲ್ಲದು, ಮಧ್ಯಾಹ್ನದ ನಂತರ ಆಫೀಸು ಕೆಲಸ ಬಿಟ್ಟುಬಿಟ್ಟು ನೈವೇದ್ಯ ಮಾಡಿಕೊಂಡು, ಪೂಜೆಮಾಡಿಕೊಂಡು ಕೂತುಕೊಳ್ಳುತ್ತಾರೆ, ಇದು ಸರಿಯಲ್ಲ. ಸರ್ಕಾರ ನಿರ್ದೇಶನ ಹೋಗುವುದಕ್ಕೆ ಮುಂದೆ ಈ ಪದ್ಧತಿಯನ್ನು ಬಿಡುತ್ತಾರೆ ಎಂದು ನನ್ನ ಭಾವನೆ. ದಿವಂಗತ ಮಹಾತ್ಮ ಗಾಂಧಿಜೀಯವರು, ಹರಿಜನರ ಸಮಸ್ಯೆ ನಿವಾರಣೆ ಮಾಡಬೇಕು, ಹಲವಾರು ಜಾತಿಯ ಒಡಲಿಗೆ ಹರಿಜನ ಎಂದು ಪದ ಕೊಟ್ಟಿದ್ದಾರೆ. ಹರಿಜನ ವಿಷ್ಣುಜನ, ಹರಜನ ಎಂದು ನಮ್ಮ ತಂದೆತಾಯಿಗಳು ಶಿವನನ್ನು ಪೂಜೆ ಮಾಡುತ್ತಿದ್ದರು. ಹರಜನ ಮತ್ತು ಹರಿಜನ ಎನ್ನುವ ವ್ಯತ್ಯಾಸ ಬಂದುಬಿಟ್ಟು ಎರಡು ಜಾತಿಯಾಗಿದೆ. ಮಹಾತ್ಮ ಗಾಂಧಿಯವರು ಈ ಜನಗಳಿಗೆ ಬೇರೆ ಹೆಸರು ಕೊಟ್ಟು, ಇನ್ನೊಂದು ಜಾತಿಗೆ ಸೇರುವ ಬದಲಾಗಿ, ಹಿಂದೂಜನ ಎಂದು ಕರೆದಿದ್ದರೆ ಏನಾಗುತ್ತಿತ್ತು ? ಈ ಒಂದು ದೃಷ್ಟಿಯಿಂದ ನೋಡಿದರೆ ಮಹಾತ್ಮ ಗಾಂಧಿಯವರು ವರ್ಣಾಶ್ರಮ ಧರ್ಮ ದೃಷ್ಟಿಯಿಂದ ನೋಡಿ ಕೆಲವು ಜನಗಳಿಗೆ ಭಿನ್ನ ಇರಬೇಕು ಎಂದು ಮಾಡಿದರು. ಎಂದು ನನ್ನ ಭಾವನೆ. ಆದರೆ ತಾವುಗಳು ಬಸವಲಿಂಗಪ್ಪನವರು ಈ ಸದನದಲ್ಲಿ ಎಂಥ ಮಾತನ್ನು ಹೇಳಿದರು ಎಂದು ನನ್ನ ಮೇಲೆ ಒಂದು ತರಹ ಕ್ರಿಟಿಸಿಸಮ್ ಏನು ಇದೆ ಅದನ್ನು ನೀವು ಮಾಡಬಹುದು. ಆದ್ದರಿಂದ ನನ್ನ ಒಂದು ನಿಲುವು, ಮಹಾತ್ಮ ಗಾಂಧಿಯವರು ಅವರು ಒಂದು ಶಕ್ತಿಯಲ್ಲಿ ಬೇರೆ ರೀತಿಯಿಂದ ಜನಸೇವೆ ಮಾಡಬಹುದಾಗಿತ್ತು. ಈ ಎರಡೂ ದೃಷ್ಟಿಯಿಂದ ನಮಗೆ ಸಾಕಷ್ಟು ಈ ಜಾತೀಯತೆಯನ್ನು ನಿರ್ಮೂಲ ಮಾಡಲಿಕ್ಕೆ ಸಮಾಜದಲ್ಲಿ ಅವಕಾಶ ಮಾಡಿಕೊಡಲಿಲ್ಲ ಎಂದು ನನ್ನ ವೈಯಕ್ತಿಕ ಆತಂಕವನ್ನು ಹೇಳುತ್ತೇನೆ. ಆದ್ದರಿಂದ ಈ ಸಮಾಜದಲ್ಲಿ ಜಾತಿಗಳನ್ನು ಆದಷ್ಟು ಬೇಗ ನಿರ್ಮೂಲನ ಮಾಡಲಿಕ್ಕೆ ಒಂದು ರಾಜ್ಯಾಂಗದ ತಿದ್ದುಪಡಿ ಮಾಡಬೇಕು.

ಶ್ರೀ ಕೆ. ಪ್ರಭಾಕರ್.—ಮಾನ್ಯ ಮಂತ್ರಿಗಳು ಉತ್ತರ ಕೊಡುವ ವೇಳೆಯಲ್ಲಿ ಮಹಾತ್ಮಾ ಗಾಂಧಿಯವರು ಜಾತಿಗಳ ಬಗ್ಗೆ ಬಹಳ ವಿರುದ್ಧವಾಗಿದ್ದರೂ ಎಂದು ಹೇಳಿದರು ಸಂತೋಷ. ವರ್ಣಾಶ್ರಮಗಳಿಂದ ಹುಟ್ಟತಕ್ಕ ಜಾತಿ, ಜಾತಿಯಿಂದ ಹುಟ್ಟತಕ್ಕ ಭೇದ, ಭೇದದಿಂದ ಹುಟ್ಟತಕ್ಕ ನೀತಿ ಬಾಹಿರತೆ ಸಮಾಜದ ಶತ್ರು ಎಂದು ಹೇಳಿದ್ದಾರೆ. ಈ ಅನೀತಿಯಾದ ವರ್ಣಾಶ್ರಮ ಧರ್ಮಗಳನ್ನು ಕೈಬಿಡುವ ಮೊದಲು ಅಸಮಧಾನವನ್ನು ವ್ಯಕ್ತಪಡಿಸಿದ್ದಾರೆ ಒಂದು. ಎರಡನೆಯದಾಗಿ ಕಾನ್ಸ್‌ಟಿಟ್ಯೂಷನ್‌ನಲ್ಲಿ "ಕಾಸ್ಟ್" ಎಂಬ ಪದ ಇರುವ ಕಡೆ ಅದು ಪೂರ್ತಿ ಹೋಗಬೇಕು ಎಂದು ಕೇಂದ್ರಕ್ಕೆ ಶಿಫಾರಸ್ಸು ಮಾಡುವ ಜವಾಬ್ದಾರಿ ಸರ್ಕಾರಕ್ಕೆ ಇದೆ ಎಂದು ತಿಳಿದುಕೊಂಡಿದ್ದೇನೆ. ರೆಸಲೂಷನ್‌ನಲ್ಲಿರುವ ಪ್ರಕಾರ ಜಾತಿ

(ಶ್ರೀ ಕೆ. ಪ್ರಭಾಕರ್)

ನಿರ್ಮೂಲ ಮಾಡುವುದಕ್ಕೆ ಪ್ರೋತ್ಸಾಹ ಕೊಡಿ ಎಂದು ಹೇಳುತ್ತೇನೆ. ಮದ್ರಾಸಿನಲ್ಲಿಯೂ ಒಪ್ಪಿಕೊಂಡರು. ಈ ನಿರ್ಣಯದಲ್ಲಿ ಇರುವ ಉದ್ದೇಶ ಏನು ಇದೆಯೋ ಅದನ್ನು ಸರ್ಕಾರದವರು ಮನಸ್ಸಿನಲ್ಲಿ ಇಟ್ಟುಕೊಂಡು ಸೂಕ್ತ ಸಲಹೆಯನ್ನು ಕೇಂದ್ರ ಸರ್ಕಾರಕ್ಕೆ ಮಾಡುವುದು ಮುಖ್ಯ. ಸೂಕ್ತ ರೀತಿಯಲ್ಲಿ ಕಾನೂನು ಬಾಹಿರವಲ್ಲದ ಕ್ರಮ ತೆಗೆದುಕೊಳ್ಳುವುದು ಸೂಕ್ತವಲ್ಲವೆ? ಇದು ವಿವಾದಗಳಿಲ್ಲದ, ಸಮಯೋಚಿತವಾದ ಕರ್ನಾಟಕಕ್ಕೆ ಗೌರವ ತರತಕ್ಕ ತರಾವು ಇದನ್ನು ಮೆಚ್ಚತಕ್ಕದ್ದೆಂದು ಹೇಳಿ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಅಗತ್ಯ ಎಂದು ಸೂಚನೆ ಮಾಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಮಾನ್ಯ ಮಂತ್ರಿಗಳು ೨ ಪಾಯಿಂಟ್ಸನ್ನು ವಿವರಮಾಡಿ ಹೇಳಬೇಕು. ಒಂದು ಜಾತ್ಯಾತೀತ ರಾಷ್ಟ್ರದಲ್ಲಿ, ರಾಜ್ಯಾಂಗದಲ್ಲಿ ಕ್ಲೀಯರ್ ಆಗಿ ಜಾತಿ ಇರಕೂಡದು ಎಂದು ಇದ್ದರೂ ಜಾತಿ ಸ್ಪಷ್ಟವಾಗಿ ಜಾರಿಯಲ್ಲಿದೆ. ಈ ಮಧ್ಯೆ ಯಾರೋ ಒಬ್ಬ ಮಹಾಶಯರು ಅಸ್ಪೃಶ್ಯರು ಇರಬೇಕು ಎಂದು ಪುಸ್ತಕ ಪಬ್ಲಿಷ್ ಮಾಡಿ ದೇಶದಲ್ಲಿ ಎಲ್ಲಾ ಭಾಗದಲ್ಲಿ ಹಂಚಿ ಪೇಪರ್ ಬರೆದಿದ್ದಾರೆ. ಇದರ ಮೇಲೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಂಡು ಅದನ್ನು ಬ್ಯಾನ್ ಮಾಡಬೇಕು ಸರ್ಕಾರ ಸಹಾಯ ಕೊಟ್ಟಿರತಕ್ಕ ವಿದ್ಯಾರ್ಥಿನಿಲಯಗಳಲ್ಲಿ ಒಕ್ಕಲಿಗ ಸಾರ್ವಜನಿಕ ವಿದ್ಯಾರ್ಥಿನಿಲಯ ಬ್ರಾಹ್ಮಣ ಸಾರ್ವಜನಿಕ ವಿದ್ಯಾರ್ಥಿನಿಲಯ, ಕುಂಚಿಟಿಗ ಸಾರ್ವಜನಿಕ ವಿದ್ಯಾರ್ಥಿನಿಲಯ ಎಂದು ಈ ರೀತಿ ಸರ್ಕಾರದ ಹಣ ಲಕ್ಷಾಂತರ ರೂಪಾಯಿ ತೆಗೆದುಕೊಂಡು, ಬಿಲ್ಡಿಂಗ್ ಕಟ್ಟಿದ್ದಾರೆ. ಅಲ್ಲೂ ಕೂಡ ಆ ಹೆಸರನ್ನು ತೆಗೆಯಬೇಕು.

ಶ್ರೀ ಬಿ. ಬಸವಲಿಂಗಪ್ಪ —ನನ್ನ ಉತ್ತರದಲ್ಲಿ ಹೇಳಿದೆ. ಜಾತಿ ಎನ್ನತಕ್ಕದ್ದು ರಾಜ್ಯಾಂಗದಲ್ಲಿ ತೆಗೆದಿಲ್ಲ. ತೆಗೆದಿಲ್ಲ ಎಂದು ಹೇಳಿದಾಗ ಇದರ ಬಗ್ಗೆ ಬೇರೆ ವಾದವನ್ನು ಹೂಡತಕ್ಕದ್ದು ಉದ್ಭವಿಸುವುದಿಲ್ಲ. ಶ್ರೀಮಾನ್ ಪ್ರಭಾಕರ್‌ರವರು ಒಂದು ಪ್ರಶ್ನೆ ಕೇಳಿದ್ದಾರೆ. ಅವರಿಗೆ ಉತ್ತರ ಇಷ್ಟೇ ಹೇಳುತ್ತೇನೆ. ಇವೊತ್ತಲ್ಲ, ನಾಳೆ ಆಲ್ಲ, ನಾಳೆದ್ದು ಜಾತಿ ನಿರ್ಮೂಲ ಆಗಬೇಕು ಎಂದು ಸಭೆ ಉದ್ದೇಶ ಇದ್ದರೆ ಇದು ಸಾಧನೆಯಾಗುತ್ತದೆ. ಕರ್ನಾಟಕ ವಿಷಯದಲ್ಲಿ ಹೇಗೆ ನಿರ್ಣಯ ತೆಗೆದುಕೊಂಡೆವೋ ಅದೇರೀತಿ ಮಾನ್ಯ ಸದಸ್ಯರು ಮನಸ್ಸು ಮಾಡಿದರೆ ಇದು ಹೋಗುವುದರಲ್ಲಿ ನಿಸ್ಸಂದೇಹ. ಈ ಸಭೆಯ ಅಭಿಪ್ರಾಯವನ್ನು ಪ್ರಧಾನ ಮಂತ್ರಿಗಳು ನಿರ್ಲಕ್ಷಿಸಿದ್ದಾರೆ ಎಂದು ಹೇಳುವುದಕ್ಕೆ ಆಧಾರವಿಲ್ಲ.

SRI C. M. ARUMUGAM .—The abolition of caste system is not a matter coming under the purview of the administration of the Government here. This system does not exists in the whole world, only in India, in Hinduism it exists. It is not there in Buddhism. Jainism, Islam, Christianity and other religions. Hinduism is based on caste system. I want to know what the Hon. Minister has to say about the 'vedas'? Shall we abolish printing, reading of these vedas? Much has been said about Brahmins, Kshatriyas, Vaishyas etc., but there is not a word about what is called the Scheduled Caste. Nowhere in the Hindu religion the Scheduled Caste has been recognised.

SRI H SIDDAVEERAPPA .—Varanashram Dharma means everyman born in this world will have to go through all the four ashramas. If you are married you become a 'Gruhasta' when you go to war you are called a 'Kshatriya' and when you are more than 60 years of age like me you are called 'Brahmana'.

SRI C. M. ARUMUGAM .—I have a book written by Dr. Ambedkar and I will pass it on to Sri Siddaveerappa. Let him go through it.

SRI H. SIDDAVEERAPPA .—I will give you a book called "The menace of Hindu Imperialism" written by Swamiji Narayana Guru. You read it.

SRI C. M. ARUMUGAM .—Sir, I was telling no purpose would be served by merely removing the name-boards of hotels. I want to ask the Government whether they are going to abolish this caste system ?

What is it they are going to do ? I want to know whether they are going to reform the Hindu relgion to fit in a human society. They say that the caste system must go. Are they going to do it ? Are they going to bring in a Bill ? Are they going to do it in Parliament ? Even a person holding a Governor's post is proud of his caste.

SRI H. SIDDAVEERAPPA (Minister for Health).—According to the Hon. Member every one born must be numbered.

MR. DEPUTY SPEAKER .—Hon. Member Sri Arumugam is a very senior member of this House. I cannot allow such interruptions under the Rules of Procedure.

SRI C. M. ARUMUGAM.—Sir, the subject is of paramount importance. Kindly bear with me for a minute. First of all, I want to know whether this House is competent to move such a Resolution. The issue pertains to the whole of India right from Himalayas to Cape Camarin concerning 500 and odd crores of people. If the Resolution is passed here, does it come into effect immediately ?

SRI H. SIDDAVEERAPPA .—It will be a pious resolution.

SRI C. M. ARUMUGAM .—There is a saying that blood if thicker than water. Are they going to give it up ? Political appointments are made from top to bottom.

MR. DEPUTY SPEAKER .—How can I permit all this ?

SRI C. M. ARUMUGAM .—Is it possible for the Government to abolish caste system ? I want to know why they have not abolished so far ? In the name of religion, poor people are exploited. This is a very important and major issue. I want this to be replied by the Hon'ble Chief Minister. The structure of caste and Hinduism must be refined. They want to change the name of the State in fact a resolution has been passed for this change. No one should say that he belongs to such and such a community. Every one must say that he is Ka arnataka. Is it possible for the Government to bring in a Act to abolish the caste system ?

MR. DEPUTY SPEAKER .—I suppose the hon. member has finished. Let the Hon'ble Minister continue his reply.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನನ್ನ ಗೆಳೆಯರು ಆವರ ಹೃದಯಾಂತರಾಳದಲ್ಲಿರುವ ವೇದನೆ ನನಗೂ ಇದೆ. ನಾನು ಮಂತ್ರಿಯಾಗಿ ಉತ್ತರ ಕೊಡುವಾಗ ಸರ್ಕಾರದ ಪರವಾಗಿ ಉತ್ತರ ಕೊಡಬೇಕಾಗುತ್ತದೆ. ವೇದ ಪುರಾಣ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದನ್ನು ನಾನೂ ಸಹ ಕಣ್ಣಿನಿಂದ ನೋಡಿದ್ದೇನೆ. ಅದರ ಒಂದು ಆಧಾರದ ಮೇಲೆ ಸಾವಿರಾರು ವರ್ಷಗಳಿಂದ ಮಡಿವಂತಿಕೆ ಬೆಳೆದುಕೊಂಡು ಬಂದಿದೆ. ಈ ಮಡಿವಂತಿಕೆಯನ್ನು ಕೆಲವೇ ಜನರು ಉಳಿಸಿಕೊಂಡು ಬಂದಿದ್ದಾರೆ; ಮತ್ತು ಮಡಿವಂತಿಕೆಯು ವಿಚಾರಸರಣಿಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಇದನ್ನು ನಾವು ನೋಡುತ್ತಿದ್ದೇವೆ. ಆವರು ಇಲ್ಲಿಯವರೆಗೆ ಬೆಳೆಸಿಕೊಂಡು ಬಂದಿರುವುದಕ್ಕೆ ಕಾರಣ, ಅದನ್ನು ಬೇರೆಯವರು ಸಹಿಸಿಕೊಂಡಿರುವುದು. ಈ ರೀತಿಯ ವಿಚಾರಸರಣಿಯನ್ನು ಕೆಲವರು ಸಹಿಸಿಕೊಂಡು ಬಂದಿರುವುದು ಸರಿಯಲ್ಲ. ಮಡಿವಂತಿಕೆ ಜೀವನ ಎಲ್ಲರಿಗೂ ಸಿಗಬೇಕು, ಅದನ್ನು ಎಲ್ಲರೂ ಅನುಭವಿಸಬೇಕು, ಅದರಲ್ಲಿ ಎಲ್ಲರೂ ಭಾಗಿಗಳಾಗಬೇಕು ಎಂದು ಮಾನ್ಯ ಸದಸ್ಯರ ಅಭಿಪ್ರಾಯ ಇದ್ದರೆ ಮತ್ತು ಎಲ್ಲರಿಗೂ ಅನ್ವಯವಾಗುವಂತಹ ಒಂದು ಧರ್ಮವನ್ನು ಸ್ಥಾಪನೆ ಮಾಡಬೇಕು ಎಂದು ಮಾನ್ಯ ಸದಸ್ಯರ ಇಚ್ಛೆ ಇದ್ದರೆ ಅದಕ್ಕೆ ಪ್ರಯತ್ನ ಮಾಡೋಣ. ಇವೊತ್ತು ಮಾನ್ಯ ಶೀರನಾಳಿ ಚಂದ್ರಶೇಖರ್ ಆವರು ಏನು ಒಂದು ನಿರ್ಣಯವನ್ನು ತೆಗೆದುಕೊಂಡು ಬಂದಿದ್ದಾರೆ ಅದು ಮಹತ್ವಪೂರ್ಣವಾದ ನಿರ್ಣಯ ವಾಗಿದೆ. ಜಾತಿ ಸೂಚಕ ನಾಮಫಲಕಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸುವುದನ್ನು ನಿಷೇಧ ಮಾಡುವ ಕಾನೂನನ್ನು ರಾಜ್ಯಾಂಗದಲ್ಲಿ ವಿತಕ್ಕೆ ಆಳವಡಿಸಬಾರದು ಎಂದು ಆವರು ಕೇಳಿದರು. ಈ ರೀತಿಯ ಜಾತಿ ಸೂಚಕ ನಾಮಫಲಕಗಳನ್ನು ತೆಗೆದು ಹಾಕುವ ಬಗ್ಗೆ ನಾವು ಪ್ರಯತ್ನ ಮಾಡಬೇಕಾಗುತ್ತದೆ. ಆ ಬಗ್ಗೆ ನಾವು ಸಭೆಯ ಒಳಗೆ ಮತ್ತು ಹೊರಗೆ ಪ್ರಯತ್ನ ಮಾಡಬೇಕಾಗುತ್ತದೆ. ಆದಕ್ಕೂ ಒಂದು ಕಾಲ ಬರುತ್ತದೆ. ಅದು ಹೋಗಬೇಕು. ಕರ್ನಾಟಕ ಎಂದು ಈ ರಾಜ್ಯಕ್ಕೆ ಹೆಸರಿಡುವ ಬಗ್ಗೆ ಇಲ್ಲಿಯವರೆಗೆ ಕಾದೆವು. ಅದು ಮೊನ್ನೆತಾನೆ ಆಯಿತು. ಅದೆ ರೀತಿ ಬಹಳದಿವಸಗಳಿಂದ ಉಳಿದು ಕೊಂಡು ಬಂದಿರುವ ಈ ಜಾತಿಗಳು ಸಹ ಹೋಗಬೇಕು. ನಾವು ಅದನ್ನು ಇಲ್ಲಿಯವರೆಗೆ ಉಳಿಸಿಕೊಂಡು ಬಂದಿದ್ದೇವೆ. ಅದು ಹೋಗುವುದಕ್ಕೂ ಒಂದು ಕಾಲ ಬರುತ್ತದೆ ಆದ್ದರಿಂದ ಆದರ ಬಗ್ಗೆ ಕೆಲವರಲ್ಲಿ ಏನು ಒಂದು ನೋವು ಇದೆ, ಆ ನೋವನ್ನು ಇನ್ನು ಸ್ವಲ್ಪ ದಿವಸಗಳ ಕಾಲ ತಡೆದುಕೊಳ್ಳಬೇಕು. ಆದು ಹೋಗುವ ಕಾಲ ಬಹಳ ಜಾಗ್ರತೆ ಬರುತ್ತದೆಂದು ನನಗನ್ನಿಸುತ್ತದೆ. ಯಾರು ಒಬ್ಬ ಮಡಿವಂತಿಕೆಯಿಂದ ಜೀವನ ಮಾಡುತ್ತಾನೆ ಅವನೇ ಜಾಣ ಎಂದು ತಿಳಿದುಕೊಳ್ಳಬೇಡಿ ಮತ್ತು ಅವನೇ ಜ್ಞಾನಿ ಎಂದು ತಿಳಿದು ಕೊಳ್ಳಬೇಡಿ. ಮಡಿವಂತಿಕೆ ಜೀವನ ಬಿಟ್ಟು ಸಮಾಜದ ಕಾಲ್ಗುಳಿತಕ್ಕೆ ಸಿಕ್ಕ ಬೇರೆ ರೀತಿಯ ಜೀವನವನ್ನು ಯಾವನು ಮಾಡುತ್ತಿದ್ದಾನೋ ಅವನನ್ನು ದಡ್ಡ ಎಂದು ತಿಳಿದುಕೊಳ್ಳಬೇಡಿ. ಒಂದು ರೀತಿಯಲ್ಲಿ ಇಬ್ಬರೂ ದಡ್ಡರೆ. ಪ್ರತಿಯೊಬ್ಬ ರೂ ಅಹಂ-ಬ್ರಹ್ಮ, ತತ್ವಂ ಅಸಿ ಎಂದು ಹೇಳುತ್ತಾರೆ. ನಾನು ಬ್ರಹ್ಮ ಎಂದು ಹೇಳುತ್ತಾರೆ. ಹಿಂದೂ ಸಮಾಜದಲ್ಲಿ ಮನುಷ್ಯ ಮನುಷ್ಯರಿಗೆ ವ್ಯತ್ಯಾಸ ಇಲ್ಲ ಎಂದು ಹೇಳಿದರೂ ಸಹ ಆಚರಣೆಯಲ್ಲಿ ಮಾತ್ರ ಆಜಗಜಾಂತರ ವ್ಯತ್ಯಾಸವಿದೆ.

ಹೇಳುವುದು ಒಂದು, ಮಾಡುವುದು ಒಂದು ನಮ್ಮ ಸಂಸ್ಕೃತಿಯಾಗಿದೆ. ಯಾವುಯಾವುದೋ ಜಾತಿಗೆ ಹೊಂದುಕೊಂಡು ಹೋಗುವ ವರ್ತನೆ ಏನು ಇದೆ ಅದೇ ಧರ್ಮ ಎಂದು ತಿಳಿದುಕೊಂಡಿದ್ದೇನೆ. Practice of caste has come to be known as Religion. ಈ ಸ್ಥಿತಿಯಲ್ಲಿ ಹೊಂದಿ ಕೊಂಡುಬರತಕ್ಕ ಕಾರ್ಯ ಕ್ರಮಗಳನ್ನು ಆಚರಣೆ ಮಾಡದೇ ಹೋದರೆ ಹಿಂದು ಅಲ್ಲ ಎನ್ನುವುದು ಮನಸ್ಸಿನ ದೌರ್ಬಲ್ಯ. ಸಮಾಜಕ್ಕೆ ಬಂದರೆ ಕಾರ್ಯಕ್ರಮ ತೆಗೆದುಕೊಳ್ಳಬಹುದು. ಮಡಿವಂತಿಕೆ ಜನರು ಜಾಣರು ಎಂದು ತಿಳಿದುಕೊಳ್ಳಬೇಡಿ. ಹಿಂದೂಗಳೆಲ್ಲರು ಒಂದೇ ಸರಿಸಮಾನರು ಎಂದು ಹೇಳಬಹುದು. ಈ ಸಮಾಜದಲ್ಲಿ ತುಳಿಯಲ್ಪಟ್ಟಿರತಕ್ಕ ಜನರ ಬಗ್ಗೆ ಎರಡು ಜವಾಬ್ದಾರಿ ಇದೆ. ನಾವೂ ಕೂಡ ಒಂದು ಸ್ವಪ್ರತಿಷ್ಠೆಯಿಂದ ಮುಂದೆ ಬರುವುದಕ್ಕೆ ಪ್ರಯತ್ನ ಮಾಡಬೇಕು. ಆವರು ಮಡಿವಂತಿಕೆ ಜೀವನ ಮಾಡಿ ಸಮಾಜದಲ್ಲಿ ತಾರತಮ್ಯ ಇರಲಿಕ್ಕೆ ಬುನಾದಿ ಆಗಿದ್ದರೆ ಅಂತಹವರ ಅಜ್ಞಾನವನ್ನು ನಿವಾರಣೆ ಮಾಡು ವುದಕ್ಕೆ ಪ್ರಯತ್ನ ಮಾಡಬೇಕು. ಆದುದರಿಂದ ಈ ಎರಡು ಜವಾಬ್ದಾರಿಯನ್ನು ನಾವು ನಿರ್ವಹಿಸಬೇಕು. ಮಡಿವಂತಿಕೆ ಜನರಲ್ಲಿ ಜ್ಞಾನೋದಯವಾಗವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ. ಈ ನಿರ್ಣಯದಲ್ಲಿ ಏನು ಉದ್ದೇಶ ಅಡಕವಾಗಿದೆ ಅದನ್ನು ಸರ್ಕಾರ ಸಂಪೂರ್ಣ ವಾಗಿ ಒಪ್ಪುತ್ತದೆ. ಆದುದರಿಂದ ಮಾನ್ಯ ಸದಸ್ಯರಾದ ಶೀರನಾಳಿ ಚಂದ್ರಶೇಖರ್‌ರವರು ಈ ನಿರ್ಣಯವನ್ನು ಮಂಡಿಸಿ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ:— ಮಾನ್ಯ ಸಚಿವರು ಮಾತನಾಡುವಾಗ ನಾಮಫಲಕ ತೆಗೆಸುವುದರ ಬಗ್ಗೆ ಹೇಳಿದರು. ಜಾತಿಗಳ ಹೆಸರು ಬರುವುದಕ್ಕೆ ಮೂಲ ಈ ಧರ್ಮವನ್ನು ಈವೊತ್ತು ಇಟ್ಟುಕೊಂಡಿರ ತಕ್ಕ ಮಠಗಳು, ದೇವಸ್ಥಾನಗಳು ಜಾತಿಗಳ ಮೂಲ ಆವಾಸ್ಥಾನವಾಗಿವೆ. ಈ ಮೂಲವನ್ನು ಬಗೆಹರಿಸು

ವುದಕ್ಕೆ ಪ್ರಯತ್ನ ಪಡಬೇಕು. ರಾಷ್ಟ್ರದ ಪ್ರಧಾನಿಗಳು ಸ್ವಾಮಿಗಳ ಪಾದ ತುಳಿದು ನೀರು ಕುಡಿಯುವುದು ರಾಷ್ಟ್ರಪತಿಗಳೂ ಕೂಡ ಹೋಗಿ ಆರೀತಿ ಮಾಡಿದರೆ ಯಾವ ರೀತಿಯಾಗಿಯೂ ಈ ಪ್ರಶ್ನೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಈ ಮೂಲ ಪ್ರಶ್ನೆಯನ್ನು ಬಗೆಹರಿಸುವುದಕ್ಕೆ ನಾವು ಮೊದಲು ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

†ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :— ಮಾನ್ಯ ಮಂತ್ರಿಗಳಾದ ಶ್ರೀ ಬಸವಲಿಂಗಪ್ಪನವರು 'ನಾನು ಏನು ರೆಸಲ್ಯೂಷನ್ ತಂದಿದ್ದೇನೆ ಅದರ ಬಗ್ಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿ ಮಾತನಾಡಿದ್ದಾರೆ. ಈಗ ಮುಖ್ಯ ಮಂತ್ರಿಗಳು ಬಂದಿದ್ದಾರೆ. ನಾನು ಒಂದು ವಿಚಾರ ಅರಿಕೆ ಮಾಡಿಕೊಳ್ಳಲಿಕ್ಕೆ ಬಯಸುತ್ತೇನೆ. ನಾನು ೪ ರೆಸಲ್ಯೂಷನ್ ತಂದಿದ್ದೆ. (1) There should be reservation for 30% for inter-caste married couples in Government service.

MR. DEPUTY SPEAKER ;— Hon. member can reply in brief if at all he desires to say anything. He cannot bring inter-caste marriages.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :— ೨ನೇ ರೆಸಲ್ಯೂಷನ್ ದೇವಸ್ಥಾನಗಳಲ್ಲಿ ಎಲ್ಲಾ ಜಾತಿಯವರಿಗೆ ಪೂಜೆಗೆ ನೇಮಕ ಮಾಡುವುದಕ್ಕೆ ಸಂಬಂಧಪಟ್ಟದ್ದು.

೩ ನೇದು ಜಾತಿ ಹಾಸ್ಟಲನ್ನು ತೆಗೆಯುತಕ್ಕದ್ದು.

೪ ನೇದು ಜಾತಿ ಉಲ್ಲೇಖನ ಮಾಡುವ ನಾಮಫಲಕ ಹೋಗಬೇಕು. ಎನ್ನುವುದು ಇದೇ ನಾಲ್ಕು ರೆಸಲ್ಯೂಷನ್ ನಾನು ತಂದಿರುವುದು. ಮಾನ್ಯ ಮಂತ್ರಿಗಳು ವ್ಹಿಪ್ ಕೊಡದೇ ಹೋದರೆ ನಾನು ವಿತ್‌ಡ್ರಾ ಮಾಡುವದಿಲ್ಲ.

ಉಪಾಧ್ಯಕ್ಷರು :— With drow ಮಾಡಬೇಕಾದರೆ unconditionally withdraw ಮಾಡಬೇಕು. ಇಲ್ಲದಿದ್ದರೆ. ೨–೩ ಕ್ಲಾಸ್ ಕಂಡೀಷನ್ಸ್ ಹಾಕಿಕೊಂಡು ವಿತ್‌ಡ್ರಾ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :— ೪ನೇ ರೆಸಲ್ಯೂಷನ್ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಬರುವುದಕ್ಕೆ ಮೊದಲು ಹೇಳಿದೆ. ನಾನು ಕಮಿಟಿ ಸದಸ್ಯತ್ವ ಕೇಳುವುದಿಲ್ಲ. ಮಂತ್ರಿ ಪದವಿ ಕೇಳುವುದಿಲ್ಲ. ನನ್ನ ಜೀವಮಾನದಲ್ಲಿ ಹೀಗೆಯೇ ಇರುತ್ತೇನೆ. ಈ ರೆಸಲ್ಯೂಷನ್‌ನ್ನು ಆಫಿಷಯಲ್ ರೆಸಲ್ಯೂಷನ್ ಆಗಿ ತರುತ್ತಾರೆಯೇ ಎನ್ನುವುದರ ಬಗೆ ಮಾನ್ಯ ಮುಖ್ಯ ಮಂತ್ರಿಗಳು ಮೊದಲು ಉತ್ತರ ಕೊಡಬೇಕು.

ಇನ್ನು ರೆಸಲ್ಯೂಷನ್ ಚರ್ಚೆಗೆ ಬಂದಂಥ ಕಾಲದಲ್ಲಿ ಕೆಲವಾರು ಟೀಕೆಗಳು ಬಂದಿವೆ. ಅದರ ಮೇಲೆ ಉತ್ತರ ಕೊಡಬೇಕಾಗುತ್ತದೆ. ಒಬ್ಬರು ಪತ್ರ ಬರೆದಿದ್ದಾರೆ. ಆ ಪತ್ರದಲ್ಲಿ ಏನಿದೆ ಎಂದರೆ...

ಉಪಾಧ್ಯಕ್ಷರು :— ಕಂಡೀಷನ್ಸ್ ಹಾಕಿದರೆ ಕೇಳುವುದಿಲ್ಲ. ವಿತ್‌ಡ್ರಾ ಮಾಡುವ ಹಾಗೆ ಇದ್ದರೆ ವಿತ್‌ಡ್ರಾ ಮಾಡುತ್ತೇನೆ ಎಂದು ಹೇಳಿ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ :—ಆ ಪತ್ರದಲ್ಲಿ ಏನು ಬರೆದಿದ್ದಾರೆ ಎಂದರೆ ಗುಂಡಪ್ಪಗೌಡರ ಕಮೀಷನ್ ಆದನಂತರ ಬ್ರಾಹ್ಮಣರು ಎಲ್ಲಾ ಕೆಲಸಗಳಲ್ಲಿಯೂ ಕೂಡ ಬಹಳ ಕಷ್ಟಪಡಕೆತ್ತಿದ್ದಾರೆ. ಯಾವ ಒಂದು ಸರ್ಕಾರಿ ಕೆಲಸಕ್ಕೂ ಅವಕಾಶ ಇಲ್ಲ. ಅಂಥಾದ್ದರಲ್ಲಿ ಬ್ರಾಹ್ಮಣರನ್ನು ಟೀಂ ಮಾಡುವ ರೆಸಲ್ಯೂಷನ್ ತಂದಿದ್ದೀರಿ. ಹೀಗೆ ೨–೩ ಜನ ಕಾಗದ ಬರೆದಿದ್ದಾರೆ. ಇದು ತಪ್ಪು ಅಭಿಪ್ರಾಯ ಕೇವಲ ಸಂಪ್ರದಾಯವನ್ನು ವಿರೋಧಿಸಿದ್ದೇನೆ. ತೋಳ ಕುರಿಮರಿ ಕಥೆ ಆಗಬಾರದು. ಯಾರೋ ಗೊಡ್ಡು ಸಂಪ್ರದಾಯ ಇಟ್ಟುಕೊಂಡು ಬಂದರು ಎಂದು ಇವನ್ನು ಹತ್ತಿಕ್ಕುವುದು ತಪ್ಪು. ಇಷ್ಟು ಹೇಳಿ ಮಾನ್ಯ ಬಸವಲಿಂಗಪ್ಪನವರು ಕೊಟ್ಟ ವಚನದ ಮೇಲೆ, ಪಾರ್ಟಿ ಸೆಕ್ರೆಟರಿಯವರ ಮಾತಿನ ಮೇಲೆ ಮತ್ತು ಮುಂದಕ್ಕಾದರೂ ಈ ನಾಲ್ಕು ರೆಸಲ್ಯೂನ್ ಬಂದೇ ಬರುತ್ತದೆ ಎನ್ನುವ ಆಶಾಭಾವನೆಯಿಂದ ನಾನು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

MR. DEPUTY SPEAKER .— Has the hon. member leave of the House to withdraw his resolution?

HON. MEMBERS .— No.

MR. DEPUTY SPEAKER .— Since there is a dissenting voice from the Members, I will put the question to the vote of the House. Under Rule 275 of the Rules of Procedure, I will have to put the question to the vote of the House.

The question is :

"That this House resolves that the Government should not allow any individuals to exhibit name boards depicting ones own caste in public places like hotels."

[*The House divided*]

MR. DEPUTY SPEAKER :—

The result of the division is :—
Ayes : 9;
Noes : 43;

[*The Resolution was negatived*]

ಶ್ರೀ ಕೋಣಂದೂರು ಲಿಂಗಪ್ಪ :— ಶ್ರೀ ಶೀರನಾಳಿ ಚಂದ್ರಶೇಖರ್ ಅವರು ಈ ನಿರ್ಣಯದ ವಿರುದ್ಧವಾಗಿ ಎದ್ದು ನಿಂತಿದ್ದಾರೆ. ಇದು [ಗೊಂದಲವುಂಟಾಯ್ತು] ನೀತಿ.

ಶ್ರೀ ಪಾಟೀಳ್ ನಾಗರಾಜ್ :— ನಿಮ್ಮ ನುಡಿ ಮತ್ತು ನಡೆ ಒಂದೇ ರೀತಿಯಾಗಿಲ್ಲ.

Allotment of Time for Severel Resolutions—Announcement

Madam Speaker—.Before going to the next business I am making a small announcement. There are certain Resolutions for which certain time has been allotted as follows —

Resolution No.	1	...	1 hour 30 minutes
Resolution No.	2	...	1 hour.
Resolution No.	5	...	1 hour.
Resolution No.	13	...	1 hour.
Resolution No.	26	...	1 hour.

The rest of the Resolutions are identical.

Private Members Resolution.—The Hon. Member Sri Virupakshappa is not here. The Hon. Member Sri Konandur Lingappa may move his resolution.

(*ii*) *Recommending to Abolish the Legislative Council.*

SRI KONANDUR LINGAPPA —I beg to move.

"That this Assembly recommends that the Legislative Council of the State be abolished."

MR. DEPUTY SPEAKER.—Motion moved.

"That this Assembly recommends that the Legislative Council of the State be abolished."

ಶ್ರೀ ವಾಟಾಳ್‌ನಾಗರಾಜ್ (ಚಾಮರಾಜಪೇಟೆ).—ಸ್ವಾಮಿ ಈ ಸಂದರ್ಭದಲ್ಲಿ ಒಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಅದು ಏನೆಂದರೆ ವಿಧಾನಸೌಧದ ನೌಕರರ ಕ್ಯಾಂಟೀನು. ಏನಿದೆ ಇದನ್ನು ಸೋಷಿಯಲ್ ವೆಲ್‌ಫೇರ್ ಸಂಸ್ಥೆಗೆ ಸಂಬಂಧಪಟ್ಟ ಮಹಿಳಾ ಸಂಘದವರು ನಡೆಸುತ್ತಿದ್ದಾರೆ. ಅವರು ತಿಂಡಿಪದಾರ್ಥಗಳನ್ನು ಸರಿಯಾಗಿ ತಯಾರು ಮಾಡಿ ನೌಕರರಿಗೆ ಒದಗಿಸುತ್ತಿಲ್ಲ. ತೀರಾ ಕೆಟ್ಟಿರತಕ್ಕ ಮತ್ತು ಹಳಸಿದ ಪದಾರ್ಥಗಳನ್ನು ನೌಕರರಿಗೆ ಒದಗಿಸುತ್ತಿದ್ದಾರೆ ಇದನ್ನು ಮೊದಲು ಸರ್ಕಾರಿ ನೌಕರರೇ ನಡೆಸುತ್ತಿದ್ದರು ಆಗ ಈ ಕ್ಯಾಂಟೀನು ಎಷ್ಟೋ ಚೆನ್ನಾಗಿ ನಡೆಯುತ್ತಿತ್ತು. ಈಗ ಅಲ್ಲಿ ಕ್ಯಾಂಟೀನ್ ನಡೆಸತಕ್ಕ ಸಂಸ್ಥೆಯವರು ಸರಿಯಾಗಿ ನಡೆಸುತ್ತಿಲ್ಲ. ಆದ್ದರಿಂದ ಇದನ್ನು ಸರ್ಕಾರದವರ ಗಮನಿಸಬೇಕೆಂದು ನಾನು ಇದನ್ನು ತಮ್ಮ ಮುಖಾಂತರ ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ.

SRI S. PUTTASWAMY.—I rise on a point of order. ಈ ಸಭೆಯಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಕೊಣಂದೂರು ಲಿಂಗಪ್ಪನವರು ತಮ್ಮ ನಿರ್ಣಯವನ್ನು ಮಂಡಿಸಿದ್ದಾರೆ. ಈಗ ಮಧ್ಯೆ ಮಾನ್ಯ ಸದಸ್ಯರು ಮಾತನಾಡುತ್ತಿರುವುದು ಸರಿಯಲ್ಲ.

MR. DEPUTY SPEAKER.—There is some force in what the Hon. Member says. Hon. Member Sri Vatal Nagaraj was a member previonsly. He must be knowing the rules and regulations well. Hon. Member Sri Lingappa has moved a non-official resolution. and he will speak on it so I request Sri Vatal Nagaraj kindly to resume his seat.

‡ ಶ್ರೀ ಕೋಣಂದೂರು ಲಿಂಗಪ್ಪ.—ಸನ್ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯದ ವಿಧಾನಪರಿಷತ್ತನ್ನು ರದ್ದುಗೊಳಿಸಬೇಕು ಎನ್ನುವ ನಿರ್ಣಯವನ್ನು ನಾನು ಮಂಡನೆ ಮಾಡುತ್ತೇನೆ. ಈ ವಿಚಾರ ನಮ್ಮ ಸೋಷಲಿಸ್ಟ್ ಪಕ್ಷಕ್ಕೆ ಹೊಸದೇನೂ ಅಲ್ಲ. ಸೋಷಲಿಸ್ಟ್ ಪಾರ್ಟಿ ಕಳೆದ ೨೫ ವರ್ಷಗಳಿಂದ ಈ ಬಗ್ಗೆ ಎಲ್ಲಾ ರಾಜ್ಯಗಳಲ್ಲಿಯೂ ಇಂತಕ್ಕ ಮೇಲ್ಮನೆಯನ್ನು ರದ್ದುಮಾಡಬೇಕು, ಹಾಗೆಯೇ ರಾಜ್ಯಸಭೆಯನ್ನು ರದ್ದುಮಾಡಬೇಕು ಎನ್ನುವ ತತ್ವವನ್ನು ಹೇಳಿಕೊಂಡು ಬಂದಿರತಕ್ಕ ಪಕ್ಷ ನಮ್ಮ ಸೋಷಲಿಸ್ಟ್ ಪಕ್ಷ. ಆದ್ದರಿಂದ ಈ ಬಗ್ಗೆ ಬೇರೆ ಯಾವುದೇ ಅರ್ಥವನ್ನು ಹಚ್ಚುವುದಕ್ಕೆ ಸಾಧ್ಯವಿಲ್ಲ. ಅದು ಸಾಧುವಾದದ್ದಲ್ಲ ಈಗಾಗಲೇ ಉತ್ತರ ಪ್ರದೇಶದಲ್ಲಿ ವಿಧಾನ ಪರಿಷತ್ತನ್ನು ರದ್ದು ಮಾಡಿದ್ದಾರೆ. ಬಂಗಾಳದಲ್ಲಿಯೂ ಸಹ ಈ ವಿಧಾನ ಪರಿಷತ್ತನ್ನು ರದ್ದು ಮಾಡಿದ್ದಾರೆ. ಆದ್ದರಿಂದ ನಾನು ಈ ನಿರ್ಣಯದ ಮುಖಾಂತರ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ ಈಗ ನಮ್ಮ ರಾಜ್ಯದಲ್ಲಿಯೂ ಈ ವಿಧಾನ ಪರಿಷತ್ತಿನ ಅವಶ್ಯಕತೆ ಇಲ್ಲ, ಇದನ್ನು ರದ್ದು ಮಾಡುವುದು ಒಳ್ಳೆಯದು ಎಂದು ನಾನು ಹೇಳಬಯಸುತ್ತೇನೆ.

ರಾಜ್ಯದ ಬೊಕ್ಕಸದಿಂದ ಬಡಬೋರೇಗೌಡನ ಬೊಕ್ಕಸದಿಂದ ವ್ಯರ್ಥವಾಗಿ ಹಣ ವ್ಯಯವಾಗುವುದು ಉಳಿತಾಯವಾಗಬೇಕು. ಯಾವುದೇ ವಿಶೇಷ ಹಕ್ಕುಗಳು ಮತ್ತು ವಿಶೇಷ ಬಾಧ್ಯತೆಗಳು ಇಲ್ಲದೇ ಇರತಕ್ಕ ವಿಧಾನ ಪರಿಷತ್ತನ್ನು ಇಟ್ಟುಕೊಳ್ಳುವುದು ಅರ್ಥವಿಲ್ಲದಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಸರ್ವಸಾಮಾನ್ಯವಾದಂಥ ಸರ್ವಶಕ್ತವಾದಂಥ ಈ ಮಹಾಸಭೆ ಇದರ ಮೇಲೆ ಮತ್ತೊಂದು ಸಭೆ ಕರೆಸುವುದು, ನಮ್ಮ ನಿರ್ಣಯಗಳನ್ನು ಅಲ್ಲಿಗೆ ಕಳಿಸಿ ಅಲ್ಲಿಂದ ಮಂಜೂರಾತಿ ಪಡೆಯತಕ್ಕದ್ದು ಪ್ರಜಾಪ್ರಭುತ್ವ ದೃಷ್ಟಿಯಿಂದ ಸಾಧುವಾದುದಲ್ಲ. ಆದುದರಿಂದ ಈವೊತ್ತು ಯಾವ ಸಲುವಾಗಿ ಇದೆ ಎನ್ನುವುದನ್ನು ವಿಚಾರ ಮಾಡಿ ಈ ೨೫ ವರ್ಷಗಳಿಂದ ಬಂದಿರತಕ್ಕ ವಿಧಾನಪರಿಷತ್ತನ್ನು ನೋಡಿದರೆ ಆಡಳಿತ ಪಕ್ಷದವರು ಯಾರನ್ನು ನೇಮಿಸಬೇಕೆಂದು ಅಪೇಕ್ಷೆ ಪಡುತ್ತಾರೋ ಅಂತಹವರಿಗೆ ಸ್ಟಾಪ್ ಗ್ಯಾಪ್ ಅರೇಂಜ್‌ಮೆಂಟ್ ಮಾಡಿದಂತೆ ಇದೆ. ಆವರಿಗೆ ಒಂದು ತಾತ್ಕಾಲಿಕ ಪರಿಹಾರ ಕೊಡುವ ರೀತಿಯೊಳಗೆ ಇದೆ. ನಾನು ನಿಮ್ಮನ್ನು ಪ್ರಶ್ನೆ ಮಾಡುತ್ತೇನೆ. ನಮ್ಮ ವಿಧಾನಪರಿಷತ್ತಿಗೆ ನೇಮಕ ಮಾಡಿದ ಮೂರು ಜನ ತೆಗೆದುಕೊಳ್ಳಿರಿ ವಿಧಾನಪರಿಷತ್ತಿಗೆ ನೇಮಕ ಮಾಡಲು ಒಂದು ಸಂಪ್ರದಾಯ ಇದೆ. ಯಾರು ಸಾಹಿತ್ಯ, ಕಲೆ, ಶಿಲ್ಪ, ಪತ್ರಿಕೋದ್ಯಮ ಇತ್ಯಾದಿ ವಿಷಯಗಳಲ್ಲಿ ವಿಶೇಷ ಪರಿಣತರಾಗಿರುತ್ತಾರೋ ಅಂಥಾವರಿಗೆ ನಿಜವಾಗಿ ಸ್ಥಾನಮಾನ ಕೊಡಬೇಕು, ಗೌರವಿಸಬೇಕು ಎಂದು ಇದೆ. ಆದರೆ ಇಂದಿನ ಸರ್ಕಾರ ಮಾನ್ಯ ದೇವರಾಜ್ ಅರಸ್‌ರವರ ಸರ್ಕಾರ ನೇಮಕ ಮಾಡಿರುವ ೩ ಜನರನ್ನು ತೆಗೆದುಕೊಂಡರೆ ಈ ಒಂದು ಅರ್ಹತೆ ಇದೆಯೇ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ನೀವೂ ಕೂಡ ಹಿಂದಿನ

(ಶ್ರೀ ಕೋಣಂದೂರು ಲಿಂಗಪ್ಪ)

ಜಾಡನ್ನೇ ಅನುಸರಿಸುತ್ತೀರಿ ಎಂದು ಅರ್ಥವಾಗುತ್ತದೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರನ್ನು ನೇಮಿಸಿದ್ದೀರಿ. ಇನ್ನು ಯಾರೋ ಒಬ್ಬರನ್ನು ನೇಮಿಸಿದ್ದೀರಿ. ಇದರಲ್ಲಿ ಏನೂ ಅರ್ಥವಿಲ್ಲ. ಹಿಂದಿನವರ ತಪ್ಪನ್ನೇ ಮಾಡಿಕೊಂಡು ಬಂದಿದ್ದಾರೆ. ನೀವು ಹೊಸ ಮಾರ್ಗವನ್ನು ತುಳಿದಿಲ್ಲ. ಜೊತೆಗೆ ಯಾರನ್ನು ನೀವು ತೃಪ್ತಿ ಪಡಿಸಬೇಕಾಗಿದೆಯೋ ಅಂತಹವರನ್ನು ತೃಪ್ತಿ ಪಡಿಸುವುದಕ್ಕೆ ಈ ವಿಧಾನಪರಿಷತ್ತನ್ನು ಇಟ್ಟಿದ್ದೀರಿ. ವಿಧಾನ ಪರಿಷತ್ತನ್ನು ವಿಧಾನಸಭೆಯ ಮೇಲೆ ಕೂತುಕೊಳ್ಳುವುದಕ್ಕೆ ಇಟ್ಟಿದ್ದೀರಿ, ತಾಲ್ಲೂಕು ಅಭಿವೃದ್ಧಿ ಮಂಡಲಿ ಅಧ್ಯಕ್ಷರ ಮೇಲೆ ಬಿ.ಡಿ.ಓ. ಇಟ್ಟಿದ್ದೀರಿ. ಹಾಗೆಯೇ ಜಿಲ್ಲಾ ಪರಿಷತ್‌ನ್ನು ಮಾಡಿದರೆ ಜಿಲ್ಲಾ ಪರಿಷತ್ ಅಧ್ಯಕ್ಷರ ಮೇಲೆ ಡೆಪ್ಯೂಟಿ ಕಮೀಷನರನ್ನು ಇಟ್ಟಿದ್ದೀರಿ. ಹಾಗೆಯೇ ಮುಖ್ಯಮಂತ್ರಿಗಳ ಮೇಲೆ ಗೌರ್ನರ್‌ರನ್ನು ಇಟ್ಟಿದ್ದೀರಿ. ಈ ರೀತಿ ಚತುರ್‌ಸ್ತಂಭ ಮಾಡಿ ಇಟ್ಟಿದ್ದೀರಿ. ಇದು ಪ್ರಜಾಪ್ರಭುತ್ವಕ್ಕೆ ತದ್ವಿರುದ್ಧ ಪದ್ಧತಿ. ಪ್ರಜಾಪ್ರಭುತ್ವದಲ್ಲಿ ವಿಧಾನಪರಿಷತ್ತಿಗೆ ಅರ್ಥವಿಲ್ಲ. ರಾಜ್ಯದ ಬೊಕ್ಕಸದ ದೃಷ್ಟಿಯಿಂದ ಎಷ್ಟೋ ಲಕ್ಷಾಂತರ ರೂಪಾಯಿಗಳು ಇದಕ್ಕೆ ವಿಚ್ಚಾರಗುತ್ತಿದೆ. ಇದನ್ನು ಇಟ್ಟುಕೊಳ್ಳುವುದರಲ್ಲಿ ಯಾವ ರೀತಿ ಸಾರ್ಥಕತೆಯೂ ಇಲ್ಲ. ಹೀಗಿದ್ದರೂ ಕೂಡ ತಾವು ವಿಧಾನ ಪರಿಷತ್ತನ್ನು ಮಾನ್ಯ ಮಾಡಿ ಉಳಿಸಿಕೊಳ್ಳುವುದರಲ್ಲಿ ಏನೋ ಒಂದು ಅನುಮಾನ ಕಾಣುತ್ತಾ ಇದೆ. ಪ್ರಜಾಪ್ರಭುತ್ವದ ಬಗ್ಗೆ ಪ್ರಾಮಾಣಿಕವಾಗಿ ನಿಷ್ಠೆ ಇರುವವರು ಯಾರೂ ಕೂಡ ವಿಧಾನ ಪರಿಷತ್ತು ಇರಬೇಕೆಂದು ಸಾಧಿಸುವುದಿಲ್ಲ ಮತ್ತು ವಾದಿಸುವುದಿಲ್ಲ. ಇದು ಸ್ಪಷ್ಟವಾದ ವಿಚಾರ ಇದರ ಸಲುವಾಗಿ ಕಳೆದ ೨೫ ವರ್ಷಗಳಿಂದ ಡಾ. ಲೋಹಿಯಾರವರ ಮುಖಂಡತ್ವದಲ್ಲಿ ಹೋರಾಟ ಮಾಡಿಕೊಂಡು ಬಂದಿದ್ದೇವೆ.

ಶ್ರೀ ಡಿ. ದೇವರಾಜ್ ಅರಸ್ (ಮುಖ್ಯಮಂತ್ರಿಗಳು).—ಸೋಷಲಿಸ್ಟ್ ಪಾರ್ಟಿ ಸದಸ್ಯರು ಮೇಲ್ಮನೆಗೆ ಆರಿಸಿ ಬಂದಿಲ್ಲವೇ ?

ಶ್ರೀ ಕೋಣಂದೂರು ಲಿಂಗಪ್ಪ.—ಎಲ್ಲಿಯವರೆಗೆ ಮೇಲ್ಮನೆಯನ್ನು ರದ್ದು ಮಾಡುವುದಿಲ್ಲವೋ ಅಲ್ಲಿಯವರೆಗೆ ನಮ್ಮವರು ಮೇಲ್ಮನೆಯ ಸದಸ್ಯರಾಗಿ ಬರುತ್ತಾರೆಂದು ಶ್ರೀ ವೈ. ಆರ್. ಪರಮೇಶ್ವರಪ್ಪ ನವರು ಹೇಳಿದ್ದಾರೆ. ಆ ಮನೆಯನ್ನು ರದ್ದು ಮಾಡಿ ಎಂದು ನಾವು ಹೇಳಿರುವುದು. ಅದನ್ನೇ ಈಗಲೂ ಕೂಡ ನಾವು ಹೇಳುವುದು.

ಶ್ರೀ ಡಿ. ದೇವರಾಜ್ ಅರಸ್.—ಸಂಬಳ ಸಾರಿಗೆ ಬೇಡ ಎಂದು ಹೇಳುತ್ತಾರೆ. ಒಟ್ಟಿನಲ್ಲಿ ತೆಗೆದುಕೊಳ್ಳುತ್ತಾರೆ.

MR. DEPUTY SPEAKER.—Even if there is provision for taking salary by the Members they can relinquish the whole or part of it.

ಶ್ರೀ ಕೋಣಂದೂರು ಲಿಂಗಪ್ಪ.—ಆದುದರಿಂದ ವಿಧಾನ ಪರಿಷತ್ತು ಮೂಗಿಗಿಂತ ಮೂಗುತಿ ಭಾರ ಅಂತ ಅನ್ನುವ ಹಾಗಾಗಿದೆ. ಇದನ್ನು ಇಟ್ಟುಕೊಳ್ಳುವುದು ಸಹಾಗೆ ಅವಶ್ಯಕತೆ ಇಲ್ಲ. ಇಷ್ಟೇ ಅಲ್ಲದೆ ವಿಧಾನ ಪರಿಷತ್ತು ರಾಜ್ಯದಲ್ಲಿ ಏನು ಕೆಲಸ ಮಾಡತಕ್ಕ ಹಕ್ಕನ್ನು ಹೊಂದಿದೆ ? ವಿಧಾನ ಪರಿಷತ್ತಿನ ಸಾಮಾನ್ಯ ಸದಸ್ಯರು ಯಾರೇ ಆಗಿರಲಿ ಅವರ ಬಗ್ಗೆ ನನಗೆ ಗೌರವ ಇದೆ. ಈ ಮನೆ ಏನು ನಿರ್ಣಯ ಮಾಡುತ್ತದೋ ಅದರ ಮೇಲೆ ಆ ಮನೆ ಸದಸ್ಯರು ಮಾತನಾಡಿ ಅದರ ಬಗ್ಗೆ ಹೇಳತಕ್ಕ ಹಕ್ಕು ಅವರಿಗೆ ಇರುವುದು ಸರಿಯೇ ? ಇದು ಮೂಲಭೂತವಾದ ಹಕ್ಕುಗಳಿಗೆ ಸಂಬಂಧಪಟ್ಟ ವಿಚಾರ. ರಾಷ್ಟ್ರಾಂಗದ ಪ್ರಭುವರ ಕೂಡ ಇದು ಬಹಳ ಗಹನವಾಗಿ ವಿಚಾರ ಮಾಡಬೇಕಾದಂಥ ವಿಷಯವಾಗಿದೆ. ಆದುದರಿಂದ ವಿಧಾನ ಪರಿಷತ್ತನ್ನು ನಾವು ಎಲ್ಲಿಯವರಿಗೆ ಇಟ್ಟುಕೊಂಡಿರುತ್ತೇವೋ ಅಲ್ಲಿಯವರೆಗೆ ರಾಜ್ಯದ ಬಡಪೋರೇಗೌಡನ ಬೊಕ್ಕಸವನ್ನು ಲೂಟಿ ಮಾಡಿಕೊಂಡು ಹೋಗತಕ್ಕ ಏರ್ಪಾಡು ಆಗುತ್ತದೆ. ಪ್ರಜಾಪ್ರಭುತ್ವಕ್ಕೆ ನಿಜವಾದ ಗೌರವವನ್ನು ಸಲ್ಲಿಸಿದ ಹಾಗೆ ಆಗುವುದಿಲ್ಲ. ಈ ದೃಷ್ಟಿಯಿಂದ ನಮ್ಮ ರಾಜ್ಯದ ವಿಧಾನ ಪರಿಷತ್ತನ್ನು ರದ್ದು ಮಾಡಬೇಕು ಎನ್ನುವುದರ ಬಗ್ಗೆ ಸನ್ಮಾನ್ಯ ಸಭೆಯ ಎಲ್ಲರೂ ಕೂಡ ಒಮ್ಮತ ಅಭಿಪ್ರಾಯ ಕೊಡಬೇಕು. ಅದಕ್ಕೆ ಯಾರೂ ಕೂಡ ಹಿಂದೇಟು ಹಾಕಬಾರದು. ಕರ್ನಾಟಕ ಹೆಸರು ಇಡುವ ಬಗ್ಗೆ ಒಳ್ಳೆಯ ಕೆಲಸ ಮಾಡುವುದಕ್ಕೆ ಒಂದಾಗಿದ್ದೇವೆ. ರಾಜ್ಯದ ಬೊಕ್ಕಸದಿಂದ ವೃಥಾ ವಿಚ್ಚಾರಗುತ್ತಿರುವ ಹಣವನ್ನು ನಿಲ್ಲಿಸುವ ಮತ್ತು ಪ್ರಜಾಪ್ರಭುತ್ವ ತತ್ವವನ್ನು ಜೀವಂತವಾಗಿ ಉಳಿಸುವ ದೃಷ್ಟಿಯಿಂದ ಈ ನಿರ್ಣಯಕ್ಕೆ ಸಂಪೂರ್ಣ ಸಮ್ಮತಿಯನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಕಡೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಈ ನಿರ್ಣಯದ ಬಗ್ಗೆ ಹೋರಾಟ ಸೋಷಿಯಲಿಸ್ಟ್ಸ್ ಪಾರ್ಟಿಗೆ ಹೊಸದಲ್ಲ. ಕಳೆದ ೨೫ ವರ್ಷಗಳಿಂದಲೂ ನೀವು ಈ ಬಗ್ಗೆ ಹೋರಾಟವನ್ನು

ಮಾಡಿಕೊಂಡು ಬಂದಿದ್ದೀರಿ. ಅದೇ ತತ್ವದ ಮೇಲೆ, ಅದೇ ಆದರ್ಶದ ಮೇಲೆ ಈ ನಿರ್ಣಯವನ್ನು ಮುಂದೆ ಮಾಡಿದ್ದೇನೆ. ಆದ್ದರಿಂದ ಯಾವ ಒಂದು ಪಕ್ಷದ ದೃಷ್ಟಿಯಿಂದ ಇದನ್ನು ನೋಡದೆ. ಇದರ ಬಗ್ಗೆ ತೀರ್ಮಾನ ಮಾಡಬೇಕು. ಕಮ್ಯೂನಿಸ್ಟ್ ಪಾರ್ಟಿ ಬೆಂಬಲ ಕೊಟ್ಟಿದ್ದಾರೆ, ಇನ್ನೂ ಇತರ ಪಕ್ಷದವರೆಲ್ಲರೂ ಬೆಂಬಲ ಕೊಟ್ಟಿದ್ದಾರೆ. ಆದಕ್ಕಾಗಿ ತಾವು ಇದನ್ನು ಸಂಪೂರ್ಣವಾಗಿ ಅಂಗೀಕರಿಸಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

12-30 P.M.

† ಶ್ರೀ ಬಿ.ವಿ. ಕಕ್ಕಿಲಾಯ.—ಮಾನ್ಯ ಅಧ್ಯಕ್ಷರೇ, ಈ ಒಂದು ನಿರ್ಣಯವನ್ನು ಏನು ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ತಂದಿದ್ದಾರೆಯೋ ಅದಕ್ಕೆ ನಾನು ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ. ಇಂಥದ್ದೇ ಒಂದು ನಿರ್ಣಯ ತರಬೇಕೆಂದು ನಾನೂ ಕೂಡ ಆಸೆಪಟ್ಟಿದ್ದೆ, ಸಾಧ್ಯವಾಗಲಿಲ್ಲ. ಈ ನಿರ್ಣಯವನ್ನು ಇಲ್ಲಿ ತರುವುದಕ್ಕೆ ಕಾರಣವೇನೆಂಬುದನ್ನು ನಾನು ಇಲ್ಲಿ ಹೇಳುತ್ತೇನೆ, ಇವತ್ತಿನ ದಿವಸ ಅನೇಕ ಪುರೋಗಾಮಿ ಶಾಸನಗಳನ್ನು ಮಾಡಬೇಕೆಂಬ ಘಟ್ಟದಲ್ಲಿದ್ದೇವೆ. ಪಾರ್ಲಿಮೆಂಟಿನಲ್ಲಿಯೂ ಹಾಗೂ ಈ ಸಭೆಯಲ್ಲಿಯೂ ಕೂಡ ಭೂಸುಧಾರಣೆ ಮತ್ತು ಕಾರ್ಮಿಕರ ಹುದ್ದೆಗಳಿಗೆ ಸಂಬಂಧಪಟ್ಟ ಶಾಸನಗಳನ್ನು ನಾವು ಅಂಗೀಕಾರ ಮಾಡಿ ಬಹಳ ಜಾಗ್ರತೆಯಾಗಿ ತ್ವರಿತಗತಿಯಿಂದ ಇವುಗಳನ್ನು ಕಾರ್ಯ ರೂಪಕ್ಕೆ ತರಬೇಕಾದಂಥ ಒಂದು ಸಂದರ್ಭದಲ್ಲಿದ್ದೇವೆ. ಹೀಗೆ ಇರಬೇಕಾದರೆ ನಮ್ಮ ಸ್ವಂತ ಅನುಭವದಿಂದ ಹೇಳಬೇಕಾದರೆ ಈ ಎರಡನೆಯ ಮನೆಯಲ್ಲಿ ಅಂದರೆ, ಮೇಲ್ಮನೆಯಲ್ಲಿ ಪುರೋಗಾಮಿ ಶಾಸನಗಳು ತ್ವರಿತಗತಿಯಿಂದ ಶಾಸನವಾಗಿ ಅಂಗೀಕರಿಸುವುದಕ್ಕೆ ಸಹಾಯಕವಾಗಿ ಬರುವುದರ ಬದಲು ಅನು ಅತಂಕವಾಗಿ ಬರುತ್ತಿರುವುದನ್ನು ನಾವು ಈಗ ನೋಡುತ್ತಿದ್ದೇವೆ. ಮಾನ್ಯ ಶ್ರೀ ಲಿಂಗಪ್ಪನವರು ಮೊದಲೇ ಹೇಳಿದ ಹಾಗೆ ಉತ್ತರ ಪ್ರದೇಶ ಹಾಗೂ ಪಶ್ಚಿಮ ಬಂಗಾಳದಲ್ಲಿ ಮೇಲಿನ ಮನೆಗಳನ್ನು ರದ್ದು ಮಾಡುವ ತೀರ್ಮಾನವನ್ನು ಬಹುಮತವಿರುವ ಸಂಯುಕ್ತ ರಂಗಗಳಿಂದ ಕೈಗೊಳ್ಳುವುದೇ ಒಂದು ಮುಖ್ಯ ಕಾರ್ಯ ವಾಗಿತ್ತು. ಪಶ್ಚಿಮ ಬಂಗಾಳದ ಮಟ್ಟಿಗೆ ಹೇಳುವುದಾದರೆ ಅಲ್ಲಿ ಸಂಯುಕ್ತ ರಂಗ ಸರ್ಕಾರಗಳು ಇದ್ದಾಗ್ಗೆ ಭೂಸುಧಾರಣೆಯ ಶಾಸನಗಳ ತಿದ್ದುಪಡಿ ಮಸೂದೆ ಅಲ್ಲಿನ ಇಂಡಸ್ಟ್ರಿಯಲ್ ಡಿಸ್‌ಪ್ಯೂಟಿಗೆ ಸಂಬಂಧಪಟ್ಟ ಕಾರ್ಮಿಕ ವಿವಾದಗಳಿಗೆ ಸಂಬಂಧಪಟ್ಟ ಪುರೋಗಾಮಿ ಶಾಸನಗಳನ್ನು ಮೇಲ್ಮನೆಯಲ್ಲಿ ಅಂಗೀಕಾರ ಮಾಡುವುದಕ್ಕೆ ಆಗದೇ ಇರುವ ಪ್ರಯುಕ್ತ ಈ ಸಭೆಗಳನ್ನು ರದ್ದು ಮಾಡುವ ಪ್ರಸಂಗ ಬಂತು ವಿಧಾನ ಸಭೆಯಲ್ಲಿ ಮಾತ್ರ ಬಹುಮತವಿತ್ತು. ಸರ್ಕಾರದವರು ನಡೆಸುವ ಪಕ್ಷಗಳಿಗೆ ಹೆಚ್ಚೆಹೆಚ್ಚೆಗೂ ಕೂಡ ಆವರ ಧೋರಣೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಮೇಲಿನ ಮನೆಯಲ್ಲಿ ಬಹುಮತ ಇಲ್ಲದೇ ಇರುವುದರಿಂದ ಅದರಿಂದಾಗತಕ್ಕ ಅತಂಕಗಳನ್ನು ನಾನು ವಿಶೇಷವಾಗಿ ನೋಡಿದ್ದೇನೆ. ಅದರಿಂದಾಗಿ ಅಲ್ಲಿ ಈ ಸಭೆಗಳನ್ನು ರದ್ದು ಮಾಡುವ ಪ್ರಮೇಯ ಬಂತು. ರೈತರಿಗೆ ರಕ್ಷಣೆ ಕೊಡುವ ಸಣ್ಣ ಶಾಸನವನ್ನು ಈ ಸಭೆಯು ಅಂಗೀಕಾರ ಮಾಡಿತು. ಆ ಶಾಸನವನ್ನು ಶಾಸನ ಸಭೆಯು ಅಧಿವೇಶನ ಮುಗಿದ ತಕ್ಷಣ ಜಾರಿಗೆ ತರುವುದಕ್ಕೆ ಯಾವರೀತಿ ತೊಂದರೆಯಾಯಿತೆಂಬುದನ್ನು ನಾವು ಕಂಡಿದ್ದೇವೆ. ಆದರೆ ಯಾವ ಸಂದರ್ಭದಲ್ಲಿಯೇ ಆಗಲೀ ಜನಗಳಿಂದ ಚುನಾಯಿತರಾಗಿ ನೇರವಾಗಿ ಆರಿಸಿ ಬಂದಮೇಲೆ ಜನತೆಯ ಅಭಿಪ್ರಾಯವನ್ನು ಪ್ರತಿಬಿಂಬಿಸುವುದಕ್ಕೆ ಕೈಗೊಳ್ಳುವಂತಹ ಕಾರ್ಯಗಳನ್ನು ತಡೆಹಿಡಿಯುವುದಕ್ಕೆ ಪ್ರತಿನಿಧಿಗಳು ಹೋಗಬಾರದು. ಅಂತಹವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಆ ಒಂದು ಅಧಿಕಾರ ಅವರಿಗೆ ಇರುವುದು ಸೂಕ್ತವಲ್ಲ. ಮೇಲ್ಮನೆಯನ್ನು ರದ್ದು ಮಾಡಬೇಕೆಂಬ ಸೂಚನೆಯನ್ನು ನಾವು ಮೊದಲಿನಿಂದಲೂ ತರುತ್ತಲೇ ಇದ್ದೇವೆ. ಎರಡನೆಯದಾಗಿ ಪಾರ್ಲಿಮೆಂಟರಿ ಡೆಮಾಕ್ರಸಿ ಪದ್ಧತಿ ಜಾರಿಯಲ್ಲಿರುವ ಎಲ್ಲಾ ದೇಶಗಳಲ್ಲಿಯೂ ಈ ಮೇಲ್ಮನೆ ಎಷ್ಟರಮಟ್ಟಿಗೆ ಜೀರ್ಣೋದ್ಧಾರವಾಗಿದೆಯೆಂಬುದನ್ನು ನೋಡಬೇಕಾಗಿದೆ. ಇಂಗ್ಲೆಂಡಿನಲ್ಲಿ ನೋಡಿದರೆ ಅಲ್ಲಿ ಹೌಸ್ ಆಫ್ ಲಾರ್ಡ್ಸ್‌ನ್ನು ಸ್ಥಾಪನೆ ಮಾಡುವಾಗ ಅಲ್ಲಿನ ಸಾಮಾನ್ಯ ಜನರಿಗೆ ಹಾಗೂ ಆರಿಸಿ ಬರುವ ಪ್ರತಿನಿಧಿಗಳಿಗೆ ಅಧಿಕಾರ ಕೊಟ್ಟರೆ ತಮ್ಮ ಒಂದು ಹಿರಿಮೆಗೆ ಹಾಗೂ ತಮ್ಮ ನಿರಂಕುಶ ಪ್ರಭುತ್ವಕ್ಕೆ ಧಕ್ಕೆ ಬರಬಹುದೆಂಬ ಉದ್ದೇಶದಿಂದ ಆದಕ್ಕೆ ತಡೆ ಹಾಕಬೇಕೆಂದು ಹೌಸ್ ಆಫ್ ಲಾರ್ಡ್ಸ್ ನಿರ್ಮಾಣಮಾಡಿ ಅದಕ್ಕೆ ಒಂದು ಹಿಡಿತವನ್ನು ಇಡತಕ್ಕ ಸಾಧನವನ್ನು ನಿರ್ಮಾಣಮಾಡಿದರು. ಅದು ಅವತ್ತಿನಿಂದ ಇವತ್ತಿನವರೆಗೆ ಆ ಒಂದು ಕಾರ್ಯವನ್ನು ಮಾಡುತ್ತಿದೆ. ಇಂಗ್ಲೆಂಡಿನಲ್ಲಿ ಹೌಸ್ ಆಫ್ ಲಾರ್ಡ್ಸ್ ಇವತ್ತು ಯಾವ ರೂಪಕ್ಕೆ ಬಂದಿದೆ ಎಂಬುದನ್ನು ನೋಡಬೇಕು ಅದು ಕೇವಲ ಕೆಲವು ಲಾರ್ಡ್ಸ್‌ಗಳ ಪ್ರಭಾವಕ್ಕೆ ಒಳಗಾಗಿದೆ. ಶತಮಾನಗಳ ಕಾಲವಿಂದ, ಬಂದಂತಹ ಹೌಸ್ ಆಫ್ ಲಾರ್ಡ್ಸ್ ಏನಿದೆ ಅದು ಇಂದು ಯಾವುದೇ ಫಂಕ್ಷನ್ ಇಲ್ಲದೆ ಇರತಕ್ಕ ಒಂದು ಸದನವಾಗಿ ನಡೆದುಕೊಂಡು ಬಂದಿದೆ. ನಮ್ಮ ದೇಶದಲ್ಲಿ ಕೂಡ ಪಾರ್ಲಿಮೆಂಟರಿ ಡೆಮಾಕ್ರಸಿ ಯಶಸ್ವಿಯಾಗಿ ನಡೆಯುವಂತಹ ಸನ್ನಿವೇಶ ಬರಬೇಕಾದರೆ ಇನ್ನೂ ಅನೇಕ ಶತಮಾನಗಳನ್ನು ಕಳೆಯಬೇಕಾದೀತು. ಇವತ್ತು ನಮ್ಮ ಪ್ರಜಾಪ್ರಭುತ್ವವನ್ನು ಪರಿಣಾಮಕಾರಿಯಾಗಿ ಮಾಡಬೇಕಾದರೆ, ಅರ್ಥಪೂರ್ಣವಾಗಿ ಮಾಡಬೇಕಾದರೆ, ಅದಕ್ಕೆ ಬರುವ

(ಶ್ರೀ ಬಿ. ವಿ. ಕಕ್ಕಿಲಾಯ)

ತಡೆಗಳನ್ನು ಮೊದಲೇ ನಿವಾರಣೆ ಮಾಡಬೇಕು. ಆಡಳಿತ ಪಕ್ಷವೇ ಅದಕ್ಕೆ ಜವಾಬ್ದಾರಿ. ಮೂರನೆಯದಾಗಿ ಇವತ್ತು ಮೇಲಿನ ಮನೆಗಳ ಸ್ವರೂಪವನ್ನು ನೋಡಬೇಕು. ಸೋವಿಯಟ್ ರಾಜ್ಯದಲ್ಲಿ ಹೌಸ್ ಆಫ್ ದಿ ಪೀಪಲ್ ಮತ್ತು ಹೌಸ್ ಆಫ್ ಸ್ಟೇಟ್ ಎಂದು ಇದೆ. ದೊಡ್ಡ ರಾಜ್ಯವಾಗಿರಲಿ, ವಿಶಾಲವಾದಂಥ ರಾಜ್ಯವಾಗಿರಲಿ, ಬಹಳ ಚಿಕ್ಕ ರಾಜ್ಯವಾಗಿರಲಿ, ಆ ರಾಜ್ಯಗಳಿಗೆ ಸಮಾನವಾದಂಥ ಪ್ರಾತಿನಿಧ್ಯ ಅಲ್ಲಿ ಇದೆ. ರಾಜ್ಯಗಳ ಸಮಸ್ಯೆಗಳನ್ನು ಆ ಸಭೆಯ ಮುಂದೆ ತರುವುದಕ್ಕೆ ಚರ್ಚೆ ಮಾಡುವುದಕ್ಕೆ ಅವರ ಒಂದು ಅಭಿಪ್ರಾಯವನ್ನು ಕೊಡುವುದಕ್ಕೆ ಆ ಒಂದು ಸಭೆ ಅಲ್ಲಿ ಇದೆ. ಅಂತಹ ಮನೆ ಎಲ್ಲಿಯೂ ಇಲ್ಲ. ವಂಶಪಾರಂಪರ್ಯವಾಗಿ ನಮ್ಮ ರಾಜ್ಯಗಳಲ್ಲಿರುವ ಈ ಮೇಲಿನ ಮನೆಗಳು ಅಲ್ಲಿರುವಂತಹ ಸ್ವಭಾವ ಹೊಂದಿರುವ ಸಭೆಗಳಲ್ಲ. ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ, ಗ್ರಾಜುಯೇಟ್ಸ್, ಟೀಚರ್ಸ್‌ಗೆ ಪ್ರಾತಿನಿಧ್ಯಗಳಿವೆ. ಲೋಕಲ್ ಬಾಡೀಸಿಗೆ ಪ್ರಾತಿನಿಧ್ಯ ಕೊಟ್ಟಿದ್ದಾರೆ. ಕಾರ್ಮಿಕರಿಗೆ ಪ್ರಾತಿನಿಧ್ಯ ಕೊಡುತ್ತಾ ಇಲ್ಲ ಕಾರ್ಮಿಕರಿಗೆ ವಿಶಿಷ್ಟ ಸಮಸ್ಯೆಗಳಿವೆ. ಆ ಸಮಸ್ಯೆಗಳನ್ನು ಪರಿಹರಿಸಲು ಪ್ರತಿನಿಧಿಸುವವರು ಇಲ್ಲಿ ಆರಿಸುವುದಕ್ಕೆ ಅವಕಾಶವಿದ್ದಿದ್ದರೆ ಸ್ವಲ್ಪಮಟ್ಟಿಗೆ ಉಪಯುಕ್ತ ಕಾರ್ಯ ಮಾಡಬಹುದಾಗಿತ್ತು. ಹಾಗೆಯೇ ಪೆಡ್ಯೂಲ್ಡ್ ಕ್ಯಾಸ್ಟ್ ಹಾಗೂ ಪೆಡ್ಯೂಲ್ಡ್ ಟ್ರೈಬ್ಸ್‌ನವರಿಗೂ ಸಹ ಪ್ರತ್ಯೇಕವಾದ ಪ್ರಾತಿನಿಧ್ಯವಿಲ್ಲ ತಮ್ಮ ಸಮಸ್ಯೆಗಳನ್ನು ಪ್ರತಿಬಿಂಬಿಸುವುದಕ್ಕೆ ಒಂದು ಪ್ರಾತಿನಿಧ್ಯ ಇದ್ದಿದ್ದರೆ ಅವರು ಸ್ವಲ್ಪಮಟ್ಟಿಗೆ ಉಪಯುಕ್ತವಾದ ಕಾರ್ಯವನ್ನು ಮಾಡುತ್ತಿದ್ದರು. ಆದ್ದರಿಂದ ಈಗ ತಮ್ಮಲ್ಲಿ ಕೇಳುವುದೇನೆಂದರೆ, ಮೇಲ್ಮನೆಯಲ್ಲಿ ಇಂತಹ ಜನತೆಗೆ ಸರಿಯಾದಂಥ ಪ್ರಾತಿನಿಧ್ಯ ಇಲ್ಲದೇ ಇರುವಂಥ ಈ ಸದನ ಕೇವಲ ರಾಜಕೀಯವಾಗಿ ನಿವೃತ್ತಿ ಹೊಂದಿದವರನ್ನು ನಾಮಕರಣ ಮಾಡಿ, ಅಲ್ಲಿ ಭೂಷಣಕ್ಕೋಸ್ಕರ ತುಂಬುವಂಥ ಸದನವಾಗಿ ಇರುವುದರಿಂದ, ಅಂತಹವರಿಂದ ಯಾವುದೇ ಒಂದು ಉಪಯುಕ್ತವಾದ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವುದೇ ಒಂದು ಕ್ಷೇತ್ರದಲ್ಲಿ ವಿಶೇಷ ಪರಿಣತರಾಗಿರತಕ್ಕವರನ್ನು ನಿಜವಾಗಿ ನುರಿತವರನ್ನು ನಾಮಿನೇಟ್ ಮಾಡದೇ ಇವತ್ತು ರಾಜಕೀಯ ಉದ್ದೇಶವನ್ನು ಈಡೇರಿಸುವಂತಹ. ಹಾಗೂ ತಮಗೆ ಬೇಕಾದಂಥವರನ್ನೇ ನಾಮಿನೇಟ್ ಮಾಡುವ ಸಂಪ್ರದಾಯ ಈಗ ಬೆಳೆಯುತ್ತಾ ಬಂದಿದೆ. ಇವತ್ತು ಈ ಮೇಲ್ಮನೆ ಎಂದು ಹೇಳುವುದು ಪ್ರಗತಿಗಾಮಿ ಶಾಸನವನ್ನು ತಡೆಹಿಡಿಯುವುದಕ್ಕೆ ಉಪಯುಕ್ತವಾದಂಥದ್ದು ಆಗಿದೆ. ಮತ್ತು ರಾಜಕೀಯದಲ್ಲಿ ನಿವೃತ್ತಿಯಾಗಿ ಮನೆಯಲ್ಲಿ ಕೂತುಕೊಂಡಿರುವಂಥವರಿಗೆ ಇದು ಒಂದು ಸದನವಾಗಿರುವುದರಿಂದ ಈ ಸದನವನ್ನು ಕೂಡಲೇ ದರಖಾಸ್ತು ಮಾಡುವುದು ಬಹಳ ಒಳ್ಳೆಯದು. ಹಾಗೆ ಮಾಡಿದರೆ ನಿಜವಾಗಿ ಪ್ರಜಾಪ್ರಭುತ್ವದಲ್ಲಿ ಒಂದು ನಿಜವಾದ ಬೆಳವಣಿಗೆಗೆ ಅವಕಾಶವಾಗುತ್ತದೆಂಬ ಕಾರಣದಿಂದ, ಈ ಒಂದು ನಿರ್ಣಯಕ್ಕೆ ನಾನು ಸಂಪೂರ್ಣ ಬೆಂಬಲವನ್ನು ಕೊಡತ್ತೇನೆ.

ಕೊನೆಯದಾಗಿ ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ನಾನು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ ಎನ್. ಪಾಟೀಲ್ (ಹುಮ್ನಾಬಾದ್).— ಮಾನ್ಯ ಉಪಾಧ್ಯಕ್ಷರೇ. ಯಾವ ಉದ್ದೇಶ ಮತ್ತು ಕಾರಣಗಳ ಮೇಲೆ ಯಾವ ಯುಗದಲ್ಲಿ ಆ ಮೇಲ್ಮನೆ ಇರಬೇಕೆಂಬ ಒಂದು ಅಗತ್ಯವಿತ್ತೋ ಆ ಸನ್ನಿವೇಶ ಮತ್ತು ಆ ಯುಗ ಈಗ ಮರೆಗಿದು ಹೋಗಿದೆ. ಅದು ಹಿಂದಿನ ಹಳೇ ಯುಗದ ಒಂದು ಅವಶೇಷ. ಅದನ್ನು ಕೂಡಲೆ ತೆಗೆದು ಹಾಕುವುದು ಒಳ್ಳೆಯದೆಂದು ಹೇಳುತ್ತೇನೆ. ಆ ಮನೆ ಇದ್ದರೆ ಏನೊಂದು ಅದರಿಂದ ಪ್ರತಿಫಲವಾಗಬಹುದು ಎಂದರೆ ಯಾವುದಾದರೊಂದು ಪ್ರೊಗ್ರೆಸೀವ್ ಲೆಜಿಸ್ಲೇಷನ್ನನ್ನು ಈ ಮನೆ ಪಾಸ್ ಮಾಡಿ ಅದನ್ನು ಆ ಮನೆಗೆ ಕಳುಹಿಸಿದರೆ ಅದನ್ನು ಅಲ್ಲಿ ಅವರ ಮಟ್ಟಾ ಹಾಕುವುದಕ್ಕೆ ಅನುಕೂಲವಾಗುತ್ತದೆ, ಇದೇ ಆ ಮನೆಯಿಂದ ನಮಗೆ ದೊರೆಯತಕ್ಕ ಪ್ರತಿಫಲ. ಈ ದಿವಸ ದೇಶದಲ್ಲಿರತಕ್ಕ ಜನತೆಯ ಅಸ್ಪಿರೇಷನ್ ಏನಿದೆ ಅವರ ಹೋರಾಟ ಎತ್ತ ಸಾಗುತ್ತಿದೆ ಎಂಬುದನ್ನು ಅರಿತುಕೊಂಡು ಅದಕ್ಕನುಸಾರವಾಗಿ ಇಲ್ಲಿ ಒಂದು ಬಿಲ್ಲನ್ನು ತಂದು ನಾವು ಪಾಸ್ ಮಾಡಿದರೆ ಆ ಮೇಲ್ಮನೆಯವರು ಅದನ್ನು ಅಲ್ಲಿ ಮಟ್ಟಾ ಹಾಕುತ್ತಾರೆ. ಅಂಥ ಒಂದು ರಿಟ್ರೊಗ್ರೇಡ್ ಥೋರಣೆ ಆ ಮನೆಗಿದೆ. ಅಂಥ ಸದನವಾದರೂ ನಮಗೇಕೆ ಬೇಕು? ನಾವು ಜನರಿಂದ ನೇರವಾಗಿ ಚುನಾವಣೆಯಾಗಿ ಬಂದಿರತಕ್ಕವರು. ನಾವು ಅವರಿಗೆ ಜವಾಬ್ದಾರಾಗಿದ್ದೇವೇ ವಿನಾ ಅವರಲ್ಲ. ಆ ಮೇಲ್ಮನೆಯ ಒಂದು ಪರಂಪರೆಯಾದರೂ ಏನು? ರಾಜಕೀಯದಲ್ಲಿ ನಿವೃತ್ತಿಹೊಂದಿದ ರಾಜಕಾರಣಿಗೆ ಅದೊಂದು ವಿಶ್ರಾಂತಿ ಗೃಹ-ಮಾತ್ರ. ಈಗಿನ ಕಾಲಕ್ಕೂ ಕೂಡ ಅಂಥಾ ಒಂದು ರಾಜಕೀಯ ನಿವೃತ್ತ ವ್ಯಕ್ತಿಗಳ ರೆಸ್ಟ್ ಹೌಸ್ ಇರಲೇಬೇಕೆಂದರೆ ಅದಕ್ಕೆ ಸರ್ಕಾರ ಒಂದು ಹೊಸ ಸ್ಕೀಮನ್ನು ತರಲಿ. ಈ ಮನೆಯಿಂ ಸಾರ್ವಭೌಮತ್ವ ಪಡೆದಿರತಕ್ಕ ಮನೆ. ಇದರ ಮೇಲೆ ಅದು ಸಾರ್ವಭೌಮತ್ವ ನಡೆಸುವುದು ಬೇಡ ಎಂದು ಹೇಳುತ್ತೇನೆ. ಅದು ರಾಜ್ಯಾಂಗಕ್ಕೂ ಕೂಡ ವಿರೋಧವಾದದ್ದು. ಆದನ್ನು ಕೂಡಲೆ ರದ್ದು ಮಾಡಿ ಬೋರೇಗೌಡನ ಹಣವನ್ನು ಉಳಿಸಿ. ಪ್ರಜಾತಂತ್ರಕ್ಕೆ ಮಟ್ಟಾಹಾಕತಕ್ಕ ಮನೆಯನ್ನು ಕೂಡಲೆ ರದ್ದು ಮಾಡಬೇಕು. ಅದಕ್ಕೆ ವಿರ್ದು ಮಾಡತಕ್ಕ

ಹಣವನ್ನು ಉಳಿಸಿದರೆ ಅದನ್ನೇ ದೇಶದ ಇತರ ಬಾಬುಗಳಿಗೆ ವೆಚ್ಚ ಮಾಡುವುದಕ್ಕೆ ಸಹಾಯಕವಾಗುತ್ತದೆ. ಈ ದಿವಸ ಆ ಮನೆಯನ್ನು ರದ್ದು ಮಾಡಿದರೆ ಕಣ್ಣೀರನ್ನು ಹಾಕತಕ್ಕವರು ದೇಶದಲ್ಲಿ ಯಾರು ಇಲ್ಲ ನಾನು ಹೀಗೆ ಹೇಳುತ್ತಿದ್ದರೆ ಇಲ್ಲಿ ಕೆಲವರು ನೀವು ಕಮ್ಯುನಿಷ್ಟ್ ಪಕ್ಷದವರು, ನಿಮ್ಮಲ್ಲಿರತಕ್ಕ ಸ್ವಂತ ಆಸ್ತಿಯನ್ನು ಆಸ್ತಿಯಿಲ್ಲದ ಬಡವರಿಗೆ ಹಂಚುತ್ತೀರಾ? ಎಂದು ಕೇಳುತ್ತಿದ್ದಾರೆ. ಸರ್ಕಾರದವರು ಅಂಥ ಒಂದು ಶಾಸನವನ್ನು ತರಲಿ ಇಂದೇ ನಾನು ನನ್ನ ಭೂಮಿಯನ್ನು ಬಡವರಿಗೆ ಹಂಚಲು ತಯಾರಿದ್ದೇನೆ. ಆ ಮೇಲ್ಮನೆಯವರು ರಾಜ್ಯೋಂಗಕ್ಕೆ ಮರ್ಯಾದೆಯನ್ನು ಕೊಡುವುದಿಲ್ಲ. ಮೊನ್ನೆ ನಾವಿಲ್ಲಿ ಪಾಸ್ ಮಾಡಿ ಕಳುಹಿಸಿದ ಗೇಣೀ ತಿದ್ದುಪಡಿ ಮಸೂದೆಯನ್ನು ಅವರು ಅಲ್ಲಿ ರದ್ದು ಮಾಡಿದರು. ನಮ್ಮ ಸಾರ್ವಭೌಮತ್ವಕ್ಕೇನು ಬೆಲೆ ಇದ್ದಹಾಗಾಯಿತು? ಹಿಂದೆ ಬ್ರಿಟಿಷರಿದ್ದ ಕಾಲಕ್ಕೆ ದೊಡ್ಡವರನ್ನು ಹೊಡೆಯುವುದಕ್ಕೆ ಒಂದು ದೊಡ್ಡ ಚಾಟಿ ಮಂತ್ರ, ಚಿಕ್ಕವರನ್ನು ಹೊಡೆಯುವುದಕ್ಕೆ ಒಂದು ಚಿಕ್ಕ ಚಾಟಿಯನ್ನು ಮಾಡಿ ನಮ್ಮ ಜನರಿಂದಲೇ ನಮ್ಮನ್ನು ಹೊಡೆಸುತ್ತಿದ್ದರು. ಈಗಲೂ ಕೂಡ ಅದೇ ಚಾಟಿ ಹೊಡೆತ ನಮ್ಮವರಿಂದಲೇ ನಮಗೆ ಬೀಳುತ್ತಿದೆ. ಆದ್ದರಿಂದ ಆ ಹೌಸನ್ನು ರದ್ದು ಮಾಡಿ ಎಂದು ಹೇಳುತ್ತೇನೆ. ಆ ಮನೆಯನ್ನು ಮುಂದುವರಿಸುವುದರಿಂದ ನಮಗೆ ಆಗತಕ್ಕ ಅನುಕೂಲ ಏಂದರೆ ಪ್ರಗತಿದಾಯಕ ತಾಸನಗಳನ್ನು ಮಟ್ಟಾಹಾಕುವುದೇ ಆ ಅನುಕೂಲ. ಇದನ್ನು ರದ್ದು ಮಾಡುವುದರಿಂದ ದೇಶಕ್ಕೆ ಬಹಳ ಹಣ ಉಳಿತಾಯವಾಗುತ್ತದೆ ಅದಕ್ಕೆ ಸರ್ಜಾರ ಖರ್ಚುಮಾಡುತ್ತಿರುವ ಹಣ ಎನಿದೆ ಅದನ್ನು ಕ್ರಿಮಿನಲ್ ವೇಸ್ಟ್ ಎಂದು ಹೇಳದೆ ವಿಧಿಯಿಲ್ಲ. ಈ ದಿವಸ ದೇಶದಲ್ಲಿ ಮಿತವ್ಯಯವನ್ನು ಜಾರಿಗೆ ತರಬೇಕೆಂದು ನಾವೆಲ್ಲರೂ ಹೇಳುತ್ತಿದ್ದೇವೆ. ಆದರೆ ಕಾರ್ಯತಃ ಯಾರೂ ಅದನ್ನು ಆಚರಣೆ ಮಾಡುತ್ತಿಲ್ಲ. ಇನ್ನು ಮೂರನೆಯದಾಗಿ ಸಾರ್ವಭೌಮತ್ವ ಇರುವುದು ಈ ಮನೆಗೆ. ಅಂದಾಗ ಇಲ್ಲಿ ತೀರ್ಮಾನವಾದ ವಿಷಯಗಳನ್ನು ಆ ಮನೆಯಲ್ಲಿ ವಿಮರ್ಶೆ ಮಾಡತಕ್ಕ ಅಗತ್ಯವಾದರೂ ಏನು? ಆದುದರಿಂದ ಅದನ್ನು ಅಬಾಲಿಷ್ ಮಾಡಬೇಕೆಂದು ಈಗಾಗಲೇ ಅನೇಕ ರಾಜ್ಯಗಳು ತೀರ್ಮಾನಕ್ಕೆ ಬಂದಿವೆ. ಅಂಥ ರಾಜ್ಯಗಳೆಂದರೆ ಬಂಗಾಳ ಮತ್ತು ಯು. ಪಿ.

ಇನ್ನು ಕೆಳಮನೆಗೆ ನೇರವಾಗಿ ಚುನಾವಣೆಗಳಿಗೆ ನಿಂತು ಆರಿಸಿಬರತಕ್ಕ ಅವಕಾಶ ಇಲ್ಲ ಎಂದು ಹೇಳತಕ್ಕ ಅಲ್ಪ ಸಂಖ್ಯಾತ ಕೊಮುಗಳವರಿಗೆ ನಾಮಕರಣ ಪದ್ಧತಿಯಮೇಲೆ ಈ ಸದನಕ್ಕೆ ಅವರನ್ನು ಸದಸ್ಯರನ್ನಾಗಿ ತೆಗೆದುಕೊಳ್ಳುವುದಕ್ಕೂ ಅವಕಾಶವಿದೆ. ಅಷ್ಟೇ ಅಲ್ಲದೆ ಈ ದಿವಸ ಯಾರೂ ಬೇಕಾದರೂ ಚುನಾವಣೆಗೆ ನಿಂತು ಆರಿಸಿ ಬರತಕ್ಕ ಅವಕಾಶ ಎಲ್ಲರಿಗೂ ಇದೆ. ಆ ಹಿಂದಿನ ಜಾತೀಯತೆ ಮೇಲೆ ಜನರನ್ನು ಚುನಾವಣೆ ಮಾಡುವುದು ಹೋಯಿತು. ಈಗತಾನೆ ನಡೆದ ಚುನಾವಣೆಗಳಲ್ಲಿ ನಾವು ಇದನ್ನು ಪ್ರತ್ಯಕ್ಷವಾಗಿ ನೋಡಿದ್ದೇವೆ ಮೈನಾರ್ಟಿ ಕೊಮುಗಳಲ್ಲೂ ನೇರವಾಗಿ ಚುನಾವಣೆಗೆ ನಿಂತು ಆರಿಸಿ ಬರತಕ್ಕಂಥ ಶಕ್ತಿವಂತರಾದ ಹಾಗೂ ಯೋಗ್ಯರಾದಂಥ ಜನರು ನಮ್ಮ ದೇಶದಲ್ಲಿದ್ದಾರೆ. ಕಾರ್ಮಿಕರಿಗೆ ಮೇಲ್ಮನೆಯಲ್ಲಿ ಪ್ರಾತಿನಿಧ್ಯ ಏಕಿಲ್ಲ? ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಲೇತ್ ಮೇಲೆ ಕೆಲಸಮಾಡತಕ್ಕ ವ್ಯಕ್ತಿ ಪಾರ್ಲಿಯಮೆಂಟಿನ ಸದಸ್ಯನಿರುತ್ತಾನೆ ಅಲ್ಲಿಯ ಜನರ ಸ್ವಭಾವ 'ಕಾಯಕವೇ ಕೈಲಾಸ' ಎಂಬುದು ಅಲ್ಲಿ ಟಿರ್ನರ್ಸ್ ಮತ್ತು ಲೋಕೋಪೆಡ್ ಮ್ಯಾನ್ ಇತ್ಯಾದಿಯವರೆಲ್ಲ ಪಾರ್ಲಿಯಮೆಂಟಿನ ಸದಸ್ಯರಾಗಿರುತ್ತಾರೆ. ನಾವು ಇಲ್ಲಿ ಸಮಂತಾವಾದ ಸಮಾಜವನ್ನು ಜಾರಿಗೆ ತರುತ್ತೇವೆಂದು ಹೇಳಿಕೊಳ್ಳುತ್ತಿರುವ ಕಾಲದಲ್ಲಿ ಆ ಮೇಲ್ಮನೆಯನ್ನು ಕೂಡಲೆ ರದ್ದು ಮಾಡಬೇಕು. ಇಲ್ಲಿರತಕ್ಕ ಸದಸ್ಯರಲ್ಲಿ ಲಾಯರಿದ್ದಾರೆ, ಪದವೀಧರರಿದ್ದಾರೆ, ಡಾಕ್ಟರುಗಳಿದ್ದಾರೆ, ಸ್ಥಳೀಯ ಸಂಸ್ಥೆಗಳ ಸಂಪರ್ಕವುಳ್ಳ ಜನರಿದ್ದಾರೆ. ಅಂದಾಗ ಇವರಿಗೆ ಮತ್ತೇಕೆ ಪ್ರತ್ಯೇಕ ಒಂದು ಸಭೆ ಇರಬೇಕು? ಚುನಾವಣೆಗಳಲ್ಲಿ ಸೋತ ರಾಜಕೀಯ ವ್ಯಕ್ತಿಗಳಿಗೊಂದು ರೆಸ್ಟ್ ಹೌಸಾಗಿ ಅದನ್ನು ಮುಂದುವರಿಸುತ್ತಿರುವುದು ಖಂಡಿತ ಸರಿಯಾದ್ದಲ್ಲ. ಈಗ ಸಮಾಜವಾದದಲ್ಲಿ ನಂಬಿಕೆ ಇರುವವರನ್ನು ಆರಿಸಿದ್ದಾರೆ. ಅಥವರು ಈ ಸಭೆಯಲ್ಲಿರುವಾಗ ಮೇಲ್ಮನೆಯನ್ನು ರದ್ದುಮಾಡಬೇಕು. ಅದಷ್ಟು ಬೇಗ ಅದನ್ನು ರದ್ದುಮಾಡುವುದು ಒಳ್ಳೆಯದು. ಇದೊಂದು ಸಭೆಯಿದ್ದರೆ ಸಾಕು. ನಮ್ಮ ದೇಶದಲ್ಲಿ ಅನೇಕರಿಗೆ ಕುಡಿಯಲು ನೀರಿಲ್ಲ, ವಾಸಮಾಡಲಂ ಮನೆಯಿಲ್ಲ, ಉದ್ಯೋಗವಿಲ್ಲ, ಹೀಗಿರುವಾಗ ಲಕ್ಷಗಟ್ಟಲೆ ಖರ್ಚು ಮಾಡಿ ಮೇಲ್ಮನೆಯನ್ನು ಮುಂದುವರಿಸುವುದು ಉಚಿತವಲ್ಲ, ಬಡವರಿಗೆ ಅದಕ್ಕಾಗುವ ಖರ್ಚನ್ನು ಉಳಿಸಿ ಸಹಾಯ ಮಾಡಬಹುದು. ಅನೇಕರಿಗೆ ಮೇಲ್ಮನೆ ರದ್ದು ಮಾಡಬೇಕೆಂಬ ಇಷ್ಟವಿದ್ದರೂ ಪಕ್ಷದ ಡಿಸಿಪ್ಲಿನ್‌ಗೆ ಕಟ್ಟುಬಿದ್ದು ಅವರು ಸುಮ್ಮನಿರಬೇಕಾಗಿದೆ. ಆದುದರಿಂದ ಈ ವಿಚಾರವನ್ನು ಸರಕಾರ ತನ್ನ ಪಕ್ಷದ ವೀಟಿಂಗಿನಲ್ಲಿ ಚರ್ಚಿಸಿ ಮುಂದಿನ ಶನಿವಾರದ ವೇಳೆಗೆ ಒಂದು ನಿರ್ಧಾರಕ್ಕೆ ಬಂದು ಈ ನಿರ್ಣಯವನ್ನು ವಿರೋಧ ಪಕ್ಷದವರು ತಂದಿದ್ದಾರೆಂದು ಸುಮ್ಮನಿರದೆ ಮೇಲ್ಮನೆಯನ್ನು ರದ್ದುಮಾಡಲು ಮುಂದಾಗಬೇಕು. ಕರ್ನಾಟಕ ಎಂದು ಹೆಸರಿಡಲು ಮುಖ್ಯ ಮಂತ್ರಿಯವರು ಒಂದು ನಿರ್ಣಯ ತಂದರು ಅದೇ ರೀತಿಯಲ್ಲಿ ಅವರು ಮೇಲ್ಮನೆಯನ್ನು ರದ್ದುಮಾಡುವುದಕ್ಕೂ ಕೂಡ ಒಂದು ನಿರ್ಣಯ ತರುವರೆಂದು ನಂಬುತ್ತೇನೆ. ಕಾಗ್ರೆಸ್ ಪಕ್ಷದವರು ಒಮ್ಮತದಿಂದ ಇದಕ್ಕೆ ಬೆಂಬಲ ಕೊಡಲು ಅವಕಾಶವಿದೆ. ದಯವಿಟ್ಟು ಎಲ್ಲರೂ ಇದನ್ನು ಒಪ್ಪಿಕೊಳ್ಳಬೇಕು. ಹಣ ವ್ಯರ್ಥವಾಗುತ್ತಿದೆ ಎಂಬುದನ್ನು ಗಮನಿಸಿ ಮೇಲ್ಮನೆಯನ್ನು ವಜಾ ಮಾಡಲು ಎಲ್ಲರೂ ಒಪ್ಪಿವರು ಅದಕ್ಕೆ ಸೂಕ್ತ ಕ್ರಮ ಕೈಗೊಳ್ಳುವರು ಎಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೇ, ಇವತ್ತು ಶ್ರೀಮಾನ್ ಕೋಣಂದೂರು ಲಿಂಗಪ್ಪ ನವರು ತಂದಿರುವ ರಾಜ್ಯದ ವಿಧಾನಪರಿಷತ್ತನ್ನು ರದ್ದುಮಾಡಬೇಕೆಂಬ ನಿರ್ಣಯವನ್ನು ನಾನು ಸ್ವಾಗತಿಸುತ್ತೇನೆ. ಅದಿರುವುದರಿಂದ ಯಾವ ಅನುಕೂಲವಿದೆ, ಅದನ್ನು ರದ್ದುಮಾಡುವುದರಿಂದ ಅನಾನುಕೂಲವೇನು ಎಂಬುದನ್ನು ನೋಡಬಹುದು. ಪರಿಷತ್ತಿಗೆ ಆಯ್ಕೆಯಾಗುವ ಸದಸ್ಯರು ಕೆಲವು ವರ್ಗಗಳನ್ನು ಪ್ರತಿನಿಧಿಸುವರು. ಬಹುಶಃ ಪದವೀಧರರ, ಕ್ಷೇತ್ರ. ಉಪಾಧ್ಯಯರ ಕ್ಷೇತ್ರ, ಸ್ಥಳೀಯ ಸಂಸ್ಥೆಗಳ ಕ್ಷೇತ್ರ, ಶಾಸನಸಭಾ ಕ್ಷೇತ್ರ, ಮುಂತಾದುವನ್ನು ಪರಿಷತ್ತಿನ ಸದಸ್ಯರು ಪ್ರತಿನಿಧಿಸುವರು. ಈ ಕ್ಷೇತ್ರಗಳಿಂದ ಆರಿಸಿ ಬರುವವರಿಗೆ ಓಟು ಮಾಡುವವರು ಒಬ್ಬರೆ. ಈ ಸಭೆಗೆ ಸದಸ್ಯರು ಜನರಿಂದ ನೇರವಾಗಿ ಆರಿಸಿಬರುವವರು. ಪದವೀಧರರು, ಉಪಾಧ್ಯಾಯರು, ಸ್ಥಳೀಯ ಸಂಸ್ಥೆಯವರು, ಶಾಸಕರು ಮುಂತಾದವರೆಲ್ಲರೂ ಈ ಸಭೆಗೆ ಆರಿಸಿ ಬಂದಿರುವವರಿಗೆ ಓಟು ಕೊಟ್ಟಿದ್ದಾರೆ. ಈ ಒಬ್ಬೊಬ್ಬರು ಐದು ಓಟುಗಳನ್ನು ಕೊಡಲು ಸಾಧ್ಯವಿದೆ. ನೇರ ಚುನಾವಣೆಯಲ್ಲಿ ಜನರು ಯಾರನ್ನು ತಿರಸ್ಕರಿಸಿರುವರೋ ಅಂಥವರು ಹಿಂದಿನ ಬಾಗಿಲಿನಿಂದ ವಿಧಾನಪರಿಷತ್ತಿಗೆ ಬರಲು ಅವಕಾಶವಿದೆ, ಇದು ಎಲ್ಲರಿಗೂ ಗೊತ್ತಿದೆ. ಇಂದು ರಾಜ್ಯ ಸರಕಾರ ಸಮಾಜವಾದೀ ಸಮಾಜ ರಚಿಸಲು ತಕ್ಕ ಕಾರ್ಯಕ್ರಮ ಕೈಕೊಳ್ಳುತ್ತಿದೆ. ಅದನ್ನು ಮಾಡಿ ಜನಸಾಮಾನ್ಯರಿಗೆ ಅನುಕೂಲ ಮಾಡಬೇಕು, ಕ್ರಾಂತಿಕಾರಿಬದಲಾವಣೆ ಮಾಡಬೇಕು ಎಂದಿದೆ. ಈಉದ್ದೇಶ ವಿಧಾನಪರಿಷತ್ತನ್ನು ಮುಂದುವರಿಸುವುದರಿಂದ ಕುಂಠಿತವಾಗುತ್ತದೆ ಎಂಬುದು ನನ್ನ ಭಾವನೆ. ಇಂದು ಅನೇಕ ಸಮಾಜವಾದಿ ಕಾರ್ಯಕ್ರಮಗಳನ್ನು ಸರಕಾರ ಇಟ್ಟುಕೊಂಡಿದೆ. ಈಗ ಸ್ವಾತಂತ್ರ್ಯ ಬಂದು ೨೫ ವರ್ಷವಾಗಿ ನಾವು ಬೆಳ್ಳಿ ಹಬ್ಬವನ್ನು ಆಚರಿಸುತ್ತಿದ್ದೇವೆ. ಹಾಗಿರುವಾಗ ಮೇಲ್ಮನೆಯನ್ನು ಮುಂದುವರಿಸಿದರೆ ಸಮಾಜವಾದಿ ಕಾರ್ಯಕ್ರಮಕ್ಕೆ ಅಡ್ಡಿಯಾಗಿ ಜನತೆಗೆ ಬೇಕಾದ ಸೌಲಭ್ಯಗಳು ಜಾಗ್ರತೆ ದೊರೆಯುವುದಿಲ್ಲ. ಹಿಂದೆ ಶ್ರೀ ಲೋಹಿಯಾರವರು ಇದನ್ನು ಹೇಳಿದ್ದಾರೆ. ಮೇಲ್ಮನೆ ಬೇಕಾಗಿಲ್ಲವೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ಕಮ್ಯೂನಿಸ್ಟರ ಅಭಿಪ್ರಾಯವೂ ಕೂಡ ಹೀಗೆಯೇ ಇದೆ. ನಿರ್ಣಯವನ್ನು ಓಟಿಗೆ ಹಾಕಿದಾಗ ಅಡಳಿತ ಕಾಗ್ರೆಸ್ಸಿನವರು ಅಭಿಪ್ರಾಯವು ಗೊತ್ತಾಗುವುದು ಮುಂದಿನ ಶನಿವಾರ ಈ ನಿರ್ಣಯದ ಚರ್ಚೆ ಮುಂದುವರೆಯುವುದು. ಆಗ ಶ್ರೀ ದೇವರಾಜ ಅರಸರ ನಿಲುವು ಗೊತ್ತಾಗುವುದು. ಅವರು ಕರ್ನಾಟಕ ಎಂದು ನಮ್ಮ ರಾಜ್ಯಕ್ಕೆ ಹೆಸರಿಟ್ಟು ಒಳ್ಳೆಯ ಹೆಸರನ್ನು ಗಳಿಸಿರಬಹುದು. ಅದು ಹೆಚ್ಚಲ್ಲ, ನಮ್ಮ ರಾಜ್ಯವನ್ನು ಭದ್ರವಾಗಿ ಕಟ್ಟಬೇಕಾದರೆ ಮಹಾ ಜನರಿಗಾಗಿ ಹಾಕಿರುವ ಕಾರ್ಯಕ್ರಮ ನೆರವೇರಬೇಕಾದರೆ ಮೇಲ್ಮನೆ ಆದಕ್ಕೆ ಸಹಕಾರಿಯಾಗಿರಬೇಕು. ಅಂದರೆ ನಾವು ಹಾಕಿದ ಎಲ್ಲಾ ಕಾರ್ಯಕ್ರಮಗಳಿಗೂ ಆ ಸಭೆ ಒಪ್ಪುವಂತಿರಬೇಕು. ಜನಸಾಮಾನ್ಯರಿಂದ ನೇರವಾಗಿ ಚುನಾಯಿತರಾಗಿರುವ ಸದಸ್ಯರಿರುವ ಸಭೆ ಇದು ಈ ಸಭೆಯ ಕಾರ್ಯಕ್ರಮವನ್ನು ವಿಧಾನ ಪರಿಷತ್ತಿನವರು ತಿರಸ್ಕರಿಸುವುದಾದರೆ ನಾವು ಜನರಿಗೆ ಆಶ್ವಾಸನೆ ಕೊಟ್ಟಿರುವುದನ್ನು ಈಡೇರಿಸುವುದಕ್ಕಾಗುವುದಿಲ್ಲ. ಈಗ ನಮ್ಮ ರಾಜ್ಯಕ್ಕೆ ಬೇಕಾದ ಅನುಕೂಲ ಮಾಡಬೇಕೆಂದಿದ್ದೀರಿ. ಸರಕಾರಿ ಪಕ್ಷದವರಿಗೆ ಒಂದು ಸ್ಥಾನ ಕೊಡಲು ಮೇಲ್ಮನೆ ಸಹಕಾರಿಯಾಗಿದೆಯೇ ಹೊರತು ಮತ್ತೇನೂ ಅನುಕೂಲ ಅದರಿಂದ ಆಗುತ್ತಿಲ್ಲ.

MR. DEPUTY SPEAKER.— I do not wish to interrupt the Hon. Member. He was referring to the Council as 'Upper House' There is nothing like Upper House and the Lower House. I think this matter was much debated in 1964 or 1965 in the Parliament and it was agreed that the Lok Sabha should call the Rajya Sabha as the 'other house' and the Rajya Sabha should call the Lok Sabha as the 'other house'. Likewise, this House should call the Council as the 'other house'.

The House will now adjourn and re-assemble at 1 P. M. on Monday the 31st July 1972.

The House adjourned at One of the clock to meet again at One of the Clock on Monday, the 31st July 1972.